ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಜುಲೈ 03, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 50 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ನಗರ ದೇವತೆ ಮುಂದೆ ವಾರದ ಸಂತೆ ಯಶಸ್ವಿ

### ಸಂತೆ ಶುರುವಾದ ದಿನವೇ ಜಿಲ್ಲೆಯಲ್ಲಿ ಉತ್ತಮ ಮಳೆ, ಭಕ್ತರಲ್ಲಿ ಸಂತಸ



ದಾವಣಗೆರೆ, ಜು. 2- ಮಳೆಗಾಗಿ ಪ್ರಾರ್ಥಿಸಿ ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಮುಂಭಾಗ ಐದು ವಾರಗಳ ಕಾಲ ನಡೆಸಲುದ್ದೇಶಿಸಿದ್ದ ಸಂತೆ ಪ್ರಥಮ ವಾರ ಯಶಸ್ವಿಯಾಗಿ ನಡೆಯಿತು. ಸಂತೆ ಆರಂಭವಾದ ದಿನವೇ ಜಿಲ್ಲಾದ್ಯಂತ ಉತ್ತಮ ಮಳೆಯೂ ಆಯಿತು.

ಬೆಳಿಗ್ಗೆ ದೇವಸ್ಥಾನದ ಧರ್ಮದರ್ಶಿ ಗೌಡ್ರು ಚನ್ನಪ್ಪ ಅವರ ನೇತೃತ್ವದಲ್ಲಿ ದೇವತೆಗೆ ಪೂಜೆ ಸಲ್ಲಿಸಲಾಯಿತು. ನಂತರ ಬೆಳಗ್ಗೆ 6 ಗಂಟೆಯಿಂದ ಶುರುವಾದ ಸಂತೆ ಸಂಜೆ 6 ಗಂಟೆಯವರೆಗೆ ನಡೆಯಿತು. ಪ್ರತಿ ದಿನ ಗಂಟೆ ಸದ್ದು ಕೇಳುತ್ತಿದ್ದ ದೇವಸ್ಥಾನ ಆವರಣದಲ್ಲಿ ಹಣ್ಣು, ಸೊಪ್ಪು, ತರಕಾರಿ ದರಗಳ ಮಾತೇ ಕೇಳಿ ಬರುತ್ತಿತ್ತು.

ಸಂತೆ ಆರಂಭವಾಗಿ ಕೆಲ ಗಂಟೆಗಳಲ್ಲಿ ಜಿಟಿ ಜಿಟಿ ಮಳೆ ಬೀಳಲಾರಂಭಿಸಿತು. ದಿನ ಪೂರ್ತಿ ಮೋಡ ಕವಿದ ವಾತಾವರಣವಿತ್ತು. ಕೆಲ ಕಾಲ ತುಂತುರು ಮಳೆ, ಮಧ್ಯಾಹ್ನ 1 ಗಂಟೆ ಸುಮಾರಿಗೆ ಜೋರು ಮಳೆ ಸುರಿಯಿತು.

ಮಳೆಯ ನಡುವೆಯೂ ಕೊಡು-ಕೊಳ್ಳುವಿಕೆಯ ವ್ಯಾಪಾರ ನಡೆಯಿತು. ಈ ಹಿಂದೆ ದೇವಿಗೆ ಎಡೆ ಜಾತ್ರೆ ನಡೆಸಿದ ದಿನವೂ ಮಳೆ ಬಂದಿತ್ತು. ಇದೀಗ ಸಂತೆಯ ದಿನವೂ ಮಳೆ ಬಂದಿದ್ದು, ದೇವಿಯ ಕೃಪೆಯಿಂದ ಉತ್ತಮ ಮಳೆಯಾಗುವ ನಿರೀಕ್ಷೆ ಜನತೆಯಲ್ಲಿದೆ.

ಇಂದು ಆರಂಭವಾದ ಸಂತೆಗೆ ವ್ಯಾಪಾರಿಗಳೇನೋ ಬಂದಿದ್ದರು. ಆದರೆ ತರಕಾರಿಗಳ ದರ ಏರಿಕೆ, ತುಂತುರು ಮಳೆ, ವ್ಯಾಪಾರ ಸ್ಥಳ ದೂರವಾಯಿತು ಎಂಬ ಕಾರಣಕ್ಕಾಗಿ ಖರೀದಿಗೆ ಗ್ರಾಹಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಪ್ರತಿ ವಾರದ ಸಂತೆಯಲ್ಲಿ ಉತ್ತಮ ವ್ಯಾಪಾರ ಮಾಡುತ್ತಿದ್ದೆವು. ಇಲ್ಲಿ ಗ್ರಾಹಕರ ಸಂಖ್ಯೆ ವಿರಳ. ಆದಾಗ್ಯೂ ಮಳೆ ಬರಲಿ ಎಂಬ ಕಾರಣಕ್ಕಾಗಿ ಇಲ್ಲಿ ಸಂತೆ ನಡೆಸಲು ಬಂದಿದ್ದೇವೆ ಎಂದು ತರಕಾರಿ ವ್ಯಾಪಾರಿ ಪ್ರಕಾಶ್ ಹೇಳಿದರು.

ಒಂದು ದಿನದ ಮಟ್ಟಿಗೆ ವ್ಯಾಪಾರ ಕಡಿಮೆಯಾಗಬಹುದು. ಆದರೆ ಮಳೆ ಇಲ್ಲದಿದ್ದರೆ ನಮಗೂ ಸೇರಿದಂತೆ, ಮುಂದಿನ ಜೀವನವೇ ಕಷ್ಟವಾಗಬಹುದು. ದೇವಿ ಮುಂದೆ ಸಂತೆ ನಡೆಸಿದಾಗ ಮಳೆ ಬಂದೇ ಬರುತ್ತದೆ. ಹೀಗಾಗಿಯೇ ಇಲ್ಲಿ ಬಂದಿದ್ದೇವೆ. ಗ್ರಾಹಕರೂ ಇತ್ತ ಬರಬೇಕು. ಇಲ್ಲಿಯೇ ಕೊಂಡುಕೊಳ್ಳುವ ಮೂಲಕ ಸಹಕಾರ ನೀಡಬೇಕು ಎಂದು ಮತ್ತೊಬ್ಬ ವ್ಯಾಪಾರಿ ವನಜಾಕ್ಷಮ್ಮ ಹೇಳಿದರು.

ಗಡಿಯಾರ ಕಂಬ, ಕೆ.ಆರ್. ಮಾರುಕಟ್ಟೆ, ಕಾಯಿಪೇಟೆ, ಶಿವಾಜಿ ವೃತ್ತ ಮತ್ತು ಕನ್ನಿಕಾ ಪರಮೇಶ್ವರಿ ರಸ್ತೆ ಇಕ್ಕೆಲಗಳಲ್ಲಿನ ಗ್ರಾಮೀಣ ವ್ಯಾಪಾರಿಗಳು ತಾವು ತಂದಿದ್ದ ತರಕಾರಿಗಳನ್ನು ಇಲ್ಲಿ ತಂದು ಮಾರಾಟ ಮಾಡಿದರು. ಸಂತೆಯಲ್ಲಿ ಪ್ರಮುಖವಾಗಿ ಬೆಂಡೆಕಾಯಿ, ಈರುಳ್ಳಿ, ತೆಂಗಿನಕಾಯಿ, (2ನೇ ಪುಟಕ್ಕೆ)

## ಮಹಾರಾಷ್ಟ್ರ: ಮತ್ತೆ ಬಂಡಾಯ

### ಎನ್‌ಸಿಪಿ ಒಡೆದ ಅಜಿತ್ ಪವಾರ್ ಡಿಸಿಎಂ ಆಗಿ ಅಧಿಕಾರ ಸ್ವೀಕಾರ

ಮುಂಬೈ/ನವದೆಹಲಿ, ಜು. 2 – ಮಹಾರಾಷ್ಟ್ರದ ರಾಜಕೀಯದಲ್ಲಿ ನಡೆದ ಹಠಾತ್ ಬೆಳವಣಿಗೆಯಲ್ಲಿ ಅಜಿತ್ ಪವಾರ್ ಅವರು ಎನ್.ಸಿ.ಪಿ. ಪಕ್ಷ ಒಡೆದಿದ್ದಾರೆ. ಪಕ್ಷದ ಹಲವಾರು ಶಾಸಕರೊಂದಿಗೆ ಅವರು ಆಡಳಿತಾರೂಢ ಶಿವಸೇನೆ - ಬಿಜೆಪಿ ಮೈತ್ರಿಕೂಟಕ್ಕೆ ಸೇರಿ ಉಪಮುಖ್ಯಮಂತ್ರಿಯಾಗಿದ್ದಾರೆ.

ಈ ಬೆಳವಣಿಗೆಯಿಂದಾಗಿ 2024ರ ಲೋಕಸಭಾ ಚುನಾವಣೆಯಲ್ಲಿ ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಎನ್.ಸಿ.ಪಿ. ಮುಖ್ಯಸ್ಥ ಶರದ್ ಪವಾರ್ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಎನ್.ಸಿ.ಪಿ.ಯ ಎಂಟು ಶಾಸಕರು ಶಿಂಧೆ - ಫಡ್ನವೀಸ್ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ರಾಜ್ಯಪಾಲ ರಮೇಶ್ ಬೈಸ್ ಅವರು ನೂತನ ಸಚಿವರು ಹಾಗೂ ಉಪ ಮುಖ್ಯಮಂತ್ರಿಗೆ ಪ್ರಮಾಣ ವಚನ ಬೋಧಿಸಿದ್ದಾರೆ.

ತಮ್ಮ ಸೋದರ ಸಂಬಂಧಿ ಅಜಿತ್ ಬಂಡಾಯವನ್ನು ದರೋಡೆ ಎಂದು ಶರದ್ ಪವಾರ್ ಹೇಳಿದ್ದಾರೆ. ಮತ್ತೊಂದೆಡೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಏಕನಾಥ ಶಿಂದೆ, ತಮ್ಮ ಸರ್ಕಾರ ಈಗ ತ್ರಿಬಲ್ ಇಂಜಿನ್ ಪಡೆದಿದೆ ಎಂದಿದ್ದಾರೆ.

ಬಿಜೆಪಿ ಜೊತೆ ಅಧಿಕಾರ ಹಂಚಿಕೊಳ್ಳುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ



ಅಜಿತ್ ಪವಾರ್, ನಾವು ಶಿವಸೇನೆ ಜೊತೆ ಹೋಗಬಹುದಾದರೆ, ಬಿಜೆಪಿ ಜೊತೆಗೂ ಹೋಗಬಹುದು. ನಾಗಾಲ್ಯಾಂಡ್‌ನಲ್ಲೂ ಇದೇ ರೀತಿ ಆಗಿದೆ ಎಂದಿದ್ದಾರೆ.

ದೇಶದ ಅಭಿವೃದ್ಧಿಗಾಗಿ ಶಿಂಧೆ ಸರ್ಕಾರ ಸೇರಿರುವುದಾಗಿ ಹೇಳಿರುವ ಅಜಿತ್ ಪವಾರ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಯಕತ್ವವನ್ನು ಪ್ರಶಂಸಿಸಿದ್ದಾರೆ.

ಎನ್.ಸಿ.ಪಿ.ಯಲ್ಲಿ ಯಾವುದೇ ಒಡಕಾಗಿಲ್ಲ ಎಂದಿರುವ ಅಜಿತ್ ಪವಾರ್, ಮುಂಬರುವ ಎಲ್ಲಾ ಚುನಾವಣೆಗಳನ್ನು ಪಕ್ಷದ ಹೆಸರು ಹಾಗೂ ಚಿಹ್ನೆಯಲ್ಲಿ ಎದುರಿಸುವುದಾಗಿ ಹೇಳಿದ್ದಾರೆ.

ಏಕನಾಥ ಶಿಂಧೆ ಅವರು ಶಿವಸೇನೆ ಪಕ್ಷದಲ್ಲಿ ಒಡಕಿಗೆ ಕಾರಣರಾಗಿ, ಬಿಜೆಪಿ ಜೊತೆ ಕೈ ಜೋಡಿಸಿದ್ದರು. ಈಗ ಅಜಿತ್ ಪವಾರ್ ಸಹ ಅದೇ ಹಾದಿ ಹಿಡಿದಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗುತ್ತಿರುವುದು ಮೂರನೇ ಬಾರಿ. ಈ ಹಿಂದೆ ಅವರು ಫಡ್ನವೀಸ್ ಹಾಗೂ ಉದ್ಧವ್ ಠಾಕ್ರೆ ಸರ್ಕಾರಗಳಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. ಈ ಹಿಂದೆ, ಅಜಿತ್ ಪವಾರ್ ಬಂಡಾಯದ ಕಾರಣದಿಂದ ಫಡ್ನವೀಸ್ ಮುಖ್ಯಮಂತ್ರಿಯಾಗಿದ್ದರು. ಆದರೆ, ಅಜಿತ್ ನಂತರ ಎನ್.ಸಿ.ಪಿ.ಗೆ ಮರಳಿದ್ದರು.

ತಮಗೆ 40ಕ್ಕೂ ಹೆಚ್ಚು ಶಾಸಕರು ಹಾಗೂ ಆರು ಪರಿಷತ್ ಸದಸ್ಯರ ಬೆಂಬಲವಿದೆ ಎಂದು ಅಜಿತ್ ಪವಾರ್ ಹೇಳಿದ್ದಾರೆ. ಈ ಕುರಿತು ರಾಜಭವನಕ್ಕೆ ಪತ್ರ ಸಹ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎನ್.ಸಿ.ಪಿ. ಪ್ರಸಕ್ತ 53 ಶಾಸಕರು ಹಾಗೂ ಒಂಭತ್ತು ಪರಿಷತ್ ಸದಸ್ಯರನ್ನು ಹೊಂದಿದೆ.

ಅಜಿತ್ ಪವಾರ್ ಬಂಡಾಯದ ನಂತರ ವಿಧಾನಸಭೆಯಲ್ಲಿ ಎನ್.ಸಿ.ಪಿ. ನಾಯಕರಾಗಿ ಜಿತೇಂದ್ರ ಅವಹಡ್ ಅವರನ್ನು ಆಯ್ಕೆ ಮಾಡಲಾಗಿದೆ. ಈ ಬಗ್ಗೆ ಮಾತನಾಡಿರುವ ಜಿತೇಂದ್ರ, ಶರದ್ ಪವಾರ್ ಅವರು ಶಾಸಕರ ಜೊತೆ ಮಾತನಾಡಲಿದ್ದಾರೆ, (2ನೇ ಪುಟಕ್ಕೆ)

## ಈಶ್ವರಪ್ಪಗೆ ನೀವೇ ಸನ್ಮಾನಿಸಿ ಎಂದು ಸ್ವಾಮೀಜಿಗೆ ಹೇಳಿದ ಸಿದ್ದರಾಮಯ್ಯ

ಬೆಂಗಳೂರು, ಜು.2- ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ ಅವರಿಗೆ ಸನ್ಮಾನ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದ ಘಟನೆ ಭಾನುವಾರ ನಡೆಯಿತು.

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಕೇತೋಹಳ್ಳಿಯ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠದಲ್ಲಿ ಭಾನುವಾರ ಸಮಾಜದ ನೂತನ ಸಚಿವರು, ಶಾಸಕರಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು.



ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ಕೆ.ಎಸ್. ಈಶ್ವರಪ್ಪ ಅವರಿಗೆ ಸನ್ಮಾನ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಕೇಳಿದಾಗ, ಇದಕ್ಕೆ 'ನೀವೇ ಸನ್ಮಾನಿಸಿ' ಎಂದು ಕೈಸನ್ನೇ ಮಾಡಿ ಮುಖ್ಯಮಂತ್ರಿ ಅತ್ತ ಮುಖ ಮಾಡಿದರು.

ಮಠದ ಶ್ರೀರಕ್ಷೆ ಸ್ವೀಕರಿಸುವಂತೆ ಈಶ್ವರಪ್ಪ ಅವರಲ್ಲಿ ನಿರೂಪಕರು ಮನವಿ ಮಾಡಿದರು. ಆಗ ಸ್ವಾಮೀಜಿ ಅವರು ಸಿದ್ದರಾಮಯ್ಯ ಅವರ ಕೈಗೆ ಸ್ವಾಮೀಜಿ ಅವರು ಶಾಲು ನೀಡಲು ಮುಂದಾದಾಗ, ನೀವೇ ಸನ್ಮಾನಿಸಿ ಎಂದು ಮುಖ್ಯಮಂತ್ರಿ ಹೇಳಿದರು.

## ಐಎಫ್‌ಎಸ್: ರಾಜ್ಯದ 10 ಅಭ್ಯರ್ಥಿಗಳು ಆಯ್ಕೆ

ಬೆಂಗಳೂರು, ಜು. 2- ಭಾರತೀಯ ಅರಣ್ಯ ಸೇವೆ ಪರೀಕ್ಷೆಯ 2022ನೇ ಸಾಲಿನ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ಕರ್ನಾಟಕದ 10 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ರಾಜ್ಯದ ವೀರಜ್ ಹೊಸೂರು 9ನೇ ರ‍್ಯಾಂಕ್, ಸುಚೇತ್ ಬಾಳ್ಕಲ್ 30ನೇ ರ‍್ಯಾಂಕ್, ಎಂ. ಪೂಜಾ 45ನೇ ರ‍್ಯಾಂಕ್, ಪಡೆದಿದ್ದಾರೆ.

ಕೇಂದ್ರ ಲೋಕಸೇವಾ ಆಯೋಗ ಕಳೆದ ನವೆಂಬರ್‌ನಲ್ಲಿ 150 ಹುದ್ದೆಗಳಿಗೆ ಮುಖ್ಯ ಪರೀಕ್ಷೆ ನಡೆಸಿತ್ತು. ಜೂನ್‌ನಲ್ಲಿ ಸಂದರ್ಶನಗಳು ಪೂರ್ಣಗೊಂಡಿದ್ದವು.

ದೇಶದ ವಿವಿಧ ರಾಜ್ಯಗಳ 147 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಸಾಮಾನ್ಯ ವರ್ಗದ 39, ಆರ್ಥಿಕ ದುರ್ಬಲ ವರ್ಗದ 21, ಹಿಂದುಳಿದ ವರ್ಗಗಳ 54, ಪರಿಶಿಷ್ಟ ಜಾತಿಯ 22 ಹಾಗೂ ಪರಿಶಿಷ್ಟ ಪಂಗಡದ 11 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ.

### ದಾವಣಗೆರೆಯ ಪೃಥ್ವಿರಾಜ್‌ಗೆ 57ನೇ ರ‍್ಯಾಂಕ್

ದಾವಣಗೆರೆ, ಜು. 2- ಕೇಂದ್ರ ಲೋಕಸೇವಾ ಆಯೋಗ ಕಳೆದ ನವೆಂಬರ್‌ನಲ್ಲಿ ನಡೆಸಿದ್ದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ದಾವಣಗೆರೆಯ ಪೃಥ್ವಿರಾಜ್ 57ನೇ ರ‍್ಯಾಂಕ್ ಪಡೆದಿದ್ದಾರೆ.



ಇವರು ನಗರದ ಎ.ಆರ್.ಜಿ. ಕಾಲೇಜು ನಿವೃತ್ತ ಪ್ರಾಂಶುಪಾಲರಾಗಿದ್ದ ಕೆ.ಎಸ್. ಬಸವರಾಜಪ್ಪ ಹಾಗೂ ಸುಧಾ ಜಿ.ಟಿ. ಅವರ ಪುತ್ರ.

ಎಲ್.ಕೆ.ಜಿ.ಯಿಂದ ಪಿಯುಸಿ ವರೆಗೆ ಇಲ್ಲಿನ ಶ್ರೀ ಜಗದ್ಗುರು ತರಳಬಾಳು ವಿದ್ಯಾಸಂಸ್ಥೆ (ಅನುಭವ ಮಂಟಪ)ಯಲ್ಲಿ ಓದಿದ್ದ ಪೃಥ್ವಿರಾಜ್, ಬೆಂಗಳೂರಿನ ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ಸಂಸ್ಥೆಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದ್ದಾರೆ. ಸಿವಿಲ್ ಸರ್ವೀಸ್ ಹಾಗೂ ಇಂಡಿಯನ್ ಫಾರಿನ್ ಸರ್ವೀಸ್ ಎರಡಕ್ಕೂ ತಯಾರಿ ನಡೆಸುತ್ತಿದ್ದೆ. ಇದೀಗ ಐಎಫ್‌ಎಸ್‌ನಲ್ಲಿ ರ‍್ಯಾಂಕ್ ದೊರೆತಿರುವುದು ಖುಷಿ ತಂದಿದೆ ಎಂದು ಅವರು 'ಜನತಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

ಭೂ ವಿಜ್ಞಾನ ಹಾಗೂ ಅರಣ್ಯ ಸೇರಿದಂತೆ ಎರಡೂ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದೆ. ಮೇನ್ಸ್ ವಿಭಾಗದಲ್ಲಿ ಸಾಮಾನ್ಯ ಜ್ಞಾನ ಹಾಗೂ ಸಾಮಾನ್ಯ ಇಂಗ್ಲಿಷ್ ವಿಷಯಗಳಿಗೆ ಪರೀಕ್ಷೆ ಬರೆಯಬೇಕಿತ್ತು. ಭೂ ವಿಜ್ಞಾನ ವಿಷಯಕ್ಕೆ ಆನ್‌ಲೈನ್ ಕೋರ್ಸ್ ಮೂಲಕ ತರಬೇತಿ ಪಡೆದಿದ್ದೆ. ಉಳಿದ ವಿಷಯಗಳನ್ನು ಸ್ವಂತಿಕೆಯಿಂದಲೇ ಅಭ್ಯಾಸ ಮಾಡಿದ್ದೆ ಎಂದು ಪೃಥ್ವಿರಾಜ್ ವಿವರಿಸಿದರು.

## ಮಹಾರಾಷ್ಟ್ರದ ಜೈನ್ ಸಂಸ್ಥೆಗೆ ಶಾಲಾ ಸಮವಸ್ತ್ರ ಪೂರೈಕೆ ಹೊಣೆ

ಬೆಂಗಳೂರು, ಜು.2- ಸರ್ಕಾರಿ ಶಾಲೆಯ ಮಕ್ಕಳಿಗೆ ಸಮವಸ್ತ್ರ ಪೂರೈಕೆ ಮಾಡುವ ಹೊಣೆಗಾರಿಕೆಯನ್ನು ಮಹಾರಾಷ್ಟ್ರದ ವಿಲಾಪಚಂದ್ ಜೈನ್ ಸಂಸ್ಥೆಗೆ ಹೊಣೆಗಾರಿಕೆ ನೀಡಲಾಗಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ (ಕೆಎಚ್‌ಡಿಸಿ) ಈ ಹಿಂದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಈ ಹಿಂದೆ ಸಮವಸ್ತ್ರ ಪೂರೈಕೆಗೆ ಅನುಮತಿ ನೀಡಿತ್ತು.

ಶಾಲಾ ಮಕ್ಕಳಿಗೆ ಕಳಪೆ ಗುಣಮಟ್ಟದ ಸಮವಸ್ತ್ರ ವಿತರಿಸಿದ ಆರೋಪ ನಿಗಮದ ಮೇಲಿದ್ದು, ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್. ಮುದ್ದಯ್ಯ ಅವರನ್ನು ಈಚೆಗೆ ಅಮಾನತ್ತುಗೊಳಿಸಲಾಗಿತ್ತು. 2020–21ನೇ ಸಾಲಿನಲ್ಲಿ ವಿದ್ಯಾ ವಿಕಾಸ ಯೋಜನೆಯಲ್ಲಿ ಒಂದರಿಂದ 10ನೇ (2ನೇ ಪುಟಕ್ಕೆ)

50ನೇ ವರ್ಷದ ಯೋಗ ಸಾಧನೆಗೆ ಅಭಿನಂದನೆಗಳು...



ಬೆಣ್ಣೆನಗರಿ ದಾವಣಗೆರೆಯಲ್ಲಿ
ದಿ|| ಅಂಗಡಿ ಲಕ್ಷ್ಮಮ್ಮನವರ
ಮೊಮ್ಮಗ
ಎಲ್.ಟಿ. ನಾಗಶೈಯನ
ಇವರು ನಿರಂತರವಾಗಿ 50 ವರ್ಷಗಳಿಂದ ಎಲೆಮರೆಕಾಯಾಗಿ ಮತ್ತು ಅಜಾತ ಶತ್ರುವಾಗಿ, ಅಧ್ಯಾತ್ಮ ಜೀವಿಯಾಗಿ ಯೋಗ ಸಾಧನೆ ಮಾಡುತ್ತಿರುವ ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಆತ್ಮಾನಂದ ಯೋಗ ಕೇಂದ್ರ, ಹಾಗೂ
ದಾವಣಗೆರೆಯ ಸಮಸ್ತ ಯೋಗ ಕೇಂದ್ರಗಳು

## ಕಾರ್ಪೊರೇಟ್ ಕುಳಗಳ ಪ್ರವೇಶದಿಂದಾಗಿ ಚುನಾವಣೆಗಳಲ್ಲಿ ಭ್ರಷ್ಟಾಚಾರ ಪ್ರಾರಂಭ

### ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ನೇತೃತ್ವದಲ್ಲಿ ನಡೆದ ಸಮಾನ ಮನಸ್ಕರ ಸಭೆಯಲ್ಲಿ ಅಭಿಮತ

ರಾಣೇಬೆನ್ನೂರು, ಜು. 2 - ನಾನು ಇಂದಿನಿಂದ ಯಾವುದೇ ಚುನಾವಣೆಯಲ್ಲಿ ಆಸೆ ಆಮೀಷಗಳಿಗೆ ಈಡಾಗಿ ಮತ ಚಲಾವಣೆ ಮಾಡುವುದಿಲ್ಲ. ಉದ್ದೇಶಪೂರ್ವಕವಾಗಿ ಮತದಾನ ಬಿಡುವದಿಲ್ಲ ಎಂದು ಈ ಸಭೆಯಲ್ಲಿ ಭಾಗವಹಿಸಿದವರು ಪ್ರಮಾಣ ಮಾಡಬೇಕು, ನಂತರ ಹತ್ತು ಜನರ ಮನ ಪರಿವರ್ತನೆ ಮಾಡಿಸುತ್ತೇನೆ ಎನ್ನುವ ನಿರ್ಧಾರ ನನ್ನದಾಗಿದೆ ಎನ್ನುವ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು.

ಆದಿಶಕ್ತಿ ಸಭಾಭವನದಲ್ಲಿ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ನೇತೃತ್ವದಲ್ಲಿ ಇಂದು ನಡೆದ





ಭ್ರಷ್ಟಾಚಾರ ರಹಿತ ಕಡ್ಡಾಯ ಮತದಾನ ಕುರಿತು ಆಂದೋಲನ ನಡೆಸಲು ಎಲ್ಲ ಪಕ್ಷಗಳ, ಎಲ್ಲ ಜಾತಿ, ಧರ್ಮದ ಸಮಾನ ಮನಸ್ಕರ ಸಭೆ ನಡೆಯಿತು.

ಯಾವುದೇ ಗ್ರಾಮದಲ್ಲಿ ಚುನಾವಣೆ ಸಂದರ್ಭದಲ್ಲಿ ಚಹಾ, ಮಂಡಕ್ಕಿ ಮಾಡಲು ಸಹ ಅಭ್ಯರ್ಥಿಗಳಿಂದ ಹಣ ಪಡೆಯುತ್ತಿದ್ದಿಲ್ಲ. ಕಾರ್ಪೊರೇಟ್ ಕುಳಗಳು ಚುನಾವಣೆ ರಂಗ ಪ್ರವೇಶಿಸಿದ ಮೇಲೆ ಅಲ್ಲಿ ಭ್ರಷ್ಟಾಚಾರ ಪ್ರಾರಂಭವಾಯಿತು. ರಾಜಕಾರಣಿಗಳೆ ಆಸೆ ಆಮೀಷಗಳನ್ನೊಡ್ಡಿ ಮತದಾರರನ್ನು ಭ್ರಷ್ಟರನ್ನಾಗಿಸಿದರು. (2ನೇ ಪುಟಕ್ಕೆ)

ವೈಕುಂಠ ಸಮಾರಾಧನೆ

ದಿ|| ಶ್ರೀ ಮೇಕಾ ಸೂರ್ಯನಾರಾಯಣ ಇವರ ಧರ್ಮಪತ್ನಿ,
ನಮ್ಮ ತಾಯಿಯವರಾದ



ನೇತ್ರದಾನಿ ಪೂಜ್ಯಶ್ರೀ
ಶ್ರೀಮತಿ ಮೇಕಾ ಜಾನಕಿಲಕ್ಷ್ಮಿ
ಇವರು ದಿನಾಂಕ : 23-06-2023ರ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ಇವರ
ವೈಕುಂಠ ಸಮಾರಾಧನೆಯನ್ನು
ದಿನಾಂಕ : 03-07-2023ನೇ ಸೋಮವಾರದಂದು
ಕಮ್ಮವಾರಿ ಸಂಘ ಸಮುದಾಯ ಭವನ, ದಾವಣಗೆರೆಯಲ್ಲಿ
ಬೆಳಿಗ್ಗೆ 11-00 ಘಂಟೆಗೆ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖಿತಪ್ತರು :
ಶ್ರೀ ಮೇಕಾ ಸತ್ಯನಾರಾಯಣ ಶ್ರೀ ಮೇಕಾ ಮುರಳಿಕೃಷ್ಣ
ಶ್ರೀಮತಿ ವಂಟಿಪಲ್ಲಿ ವೆಂಕಟಲಕ್ಷ್ಮಿ ಹಾಗೂ ಅಳಿಯಂದಿರು,
ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ವಿ ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

## ವಚನಕಾರರ ಜೀವನ ಮೌಲ್ಯಗಳು ಮಾದರಿ

### ಜಗಳೂರು: ಡಾ. ಫ.ಗು. ಹಳಕಟ್ಟಿ ಜನ್ಮ ದಿನದ ಕಾರ್ಯಕ್ರಮದಲ್ಲಿ ಶಾಸಕ ದೇವೇಂದ್ರಪ್ಪ



ಜಗಳೂರು, ಜು.2- ಫ.ಗು.ಹಳಕಟ್ಟಿ ಅವರಂತಹ ಶ್ರೇಷ್ಠ ವಚನಕಾರರು ವಚನ ಸಾಹಿತ್ಯಕ್ಕೆ ಮೆರಗು ನೀಡಿದರು. ಅವರ ಜೀವನ ಚರಿತ್ರೆಗಳನ್ನು ವಿದ್ಯಾರ್ಥಿ ಯುವ ಸಮೂಹ ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದಿಂದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಹಾಗೂ ಡಾ. ಫ.ಗು. ಹಳಕಟ್ಟಿಯವರ ಜನ್ಮದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ ಸೇರಿದಂತೆ ಮಹನೀಯರ ಜಯಂತಿಗಳನ್ನು ಮೆರವಣಿಗೆಗೆ ಸೀಮಿತಗೊಳಿಸದೆ, ಅವರ ವಿಚಾರಧಾರೆಗಳನ್ನು ವಿಷಯ ಮಂಡನೆಯ ಮೂಲಕ ಸಮಾಜಕ್ಕೆ ಪಸರಿಸಬೇಕಿದೆ ಎಂದರು.

ಮನುಷ್ಯನು ಜೀವನದಲ್ಲಿ ಮಾನವೀಯತೆ ಮೈಗೂಡಿಸಿಕೊಳ್ಳಬೇಕು. ವಚನಕಾರರ ಹೇಳಿಕೆಯಂತೆ ಸಕಲ ಜೀವಾತ್ಮಗಳಿಗೆ ಲೇಸು ಬಯಸಬೇಕು. ಮೌಲ್ಯ, ಚಿಂತನೆ, ಗೌರವ ಪ್ರವೃತ್ತಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮುಖ್ಯವಾಗಿದೆ. ಆದ್ದರಿಂದ ಪಟ್ಟಣದಲ್ಲಿ ಸುಸಜ್ಜಿತವಾದ ಕಟ್ಟಡದಲ್ಲಿ ಜ್ಞಾನ ಸಂಪಾದನೆಗಾಗಿ ಗ್ರಂಥಾಲಯ ವ್ಯವಸ್ಥೆ ಕಲ್ಪಿಸುವೆ ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಸಾಹಿತಿ ಎನ್.ಟಿ. ಎರ್ರಿಸ್ವಾಮಿ ಉಪನ್ಯಾಸ ನೀಡಿ, ಸಕಲರ ಲೇಸ ಬಯಸುವವರೇ ಶರಣರು. ವಚನ ಕ್ರಾಂತಿಗೆ ಅನುಭವ ಮಂಟಪ ಮಾದರಿಯಾಗಿದೆ. ಕನ್ನಡ ನಾಡಿನ ವಚನ ಸಾಹಿತ್ಯದ ಕ್ರಾಂತಿಗಾಗಿ 1880 ರಲ್ಲಿ ಫ.ಗು. ಹಳಕಟ್ಟಿ ಅವರು ಜನಿಸಿದರು. 250 ವಚನಕಾರರನ್ನು ಗುರುತಿಸಿ ಅವರ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಸ್ವತಃ ಮುದ್ರಣ ಮಾಧ್ಯಮ ತೆರೆದು 170ಕ್ಕೂ ಅಧಿಕ ಪುಸ್ತಕಗಳನ್ನು ಅನಾವರಣಗೊಳಿಸಿದರು. ಇದರಿಂದ ಲಕ್ಷಾಂತರ ವಚನಗಳು ಜನಸಾಮಾನ್ಯರಿಗೆ ಲಭ್ಯವಾದವು ಎಂದು ಸ್ಮರಿಸಿದರು.

ಸಮಾರಂಭದಲ್ಲಿ ತಹಶೀಲ್ದಾರ್ ಸಂತೋಷ್ ಕುಮಾರ್, ಸಾಹಿತಿ ಡಿ.ಸಿ. (2ನೇ ಪುಟಕ್ಕೆ)

ಸಂಶಿ ಜಯಣ್ಣ ನಿಧನ



ದಾವಣಗೆರೆ #1968/53, ಎಸ್.ಎಸ್. ಲೇಔಟ್,
1ನೇ ಮೇನ್, 1ನೇ ಕ್ರಾಸ್, ಪರಂಜ್ಯೋತಿ ನಿವಾಸದ ವಾಸಿ
ಶ್ರೀ ಸಂಶಿ ಜಯಣ್ಣ
ಇವರು ದಿನಾಂಕ 2.7.2023ರ ಭಾನುವಾರ ಸಂಜೆ 4.30ಕ್ಕೆ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.7.2023ರ ಸೋಮವಾರ ಮಧ್ಯಾಹ್ನ 12.30ಕ್ಕೆ ನಗರದ ಬೂದಾಳ್ ರೋಡ್‌ನಲ್ಲಿರುವ ಹಿಂದೂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ :
ಸಂಶಿ ಕುಟುಂಬದವರು ಮತ್ತು ಬಂಧು-ಮಿತ್ರರು.
ಮೊ : 98802 14143, 94826 92351

# ಅನ್ನಕ್ಕೆ ರೈತ, ಜ್ಞಾನಕ್ಕೆ ಶಿಕ್ಷಕ ಮುಖ್ಯ : ರಂಭಾಪುರಿ ಶ್ರೀ



ಹರಿಹರ

ಹರಿಹರ, ಜು. 2 - ಸುಖಮಯವಾಗಿ ಬದುಕಿ ಬಾಳಲು ರೈತ ಮತ್ತು ಶಿಕ್ಷಕರ ಪಾತ್ರ ಬಹು ಅಮೂಲ್ಯ. ಹಸಿವು ನೀಗಿಸಲು ರೈತನ ದುಡಿಮೆ ಹಾಗೂ ಜ್ಞಾನಿಯಾಗಿ ಸುಸಂಸ್ಕೃತರಾಗಿ ಬದುಕಿ ಬಾಳಲು ಶಿಕ್ಷಕ ಇವರಿಬ್ಬರ ಸಹಕಾರ ಅವಶ್ಯಕವಾಗಿರಬೇಕು ಎಂದು ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶನಿವಾರ ನಗರದ ಜಗದ್ಗುರು ರೇಣುಕಾಚಾರ್ಯ ಮಂದಿರ ಹಳೇಪೇಟೆ ಶ್ರೀ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಜರುಗಿದ ಶ್ರೀ ರಂಭಾಪುರಿ ಜಗದ್ಗುರುಗಳ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಜನ ಜಾಗೃತಿ ಧರ್ಮ ಸಮಾರಂಭದ 3ನೇ ದಿನದ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಒಳ್ಳೆಯ ಮಾತು ದ್ವೇಷ ಕಳೆಯುತ್ತದೆ. ಒಳ್ಳೆಯ ಮನಸ್ಸು ಸಂಬಂಧಗಳನ್ನು ಕಾಪಾಡುತ್ತದೆ. ಒಳ್ಳೆಯ ವ್ಯಕ್ತಿತ್ವ ಜೀವನವನ್ನೇ ಬದಲಾಯಿಸುತ್ತದೆ. ಬೆವರ ಹನಿ ಭರವಸೆ ನೀಡಿದರೇ ಕಣ್ಣೀರ ಹನಿ ಬದುಕನ್ನು ಕಲಿಸುತ್ತದೆ. ವಿನಯವಿಲ್ಲದ ವಿದ್ಯೆ, ಹಸಿವಿಲ್ಲದ ಊಟ, ಹರಿತವಿಲ್ಲದ ಆಯುಧ, ಉಪಕಾರವಿಲ್ಲದ ಜೀವನ, ಗುಣವಿಲ್ಲದ ರೂಪ, ಉಪಯೋಗಕ್ಕೆ ಬಾರದ ಹಣ ವ್ಯರ್ಥವೆಂದು ನೀತಿ ಶಾಸ್ತ್ರ ಬೋಧಿಸುತ್ತದೆ. ಮನುಷ್ಯ ಫಲಭರಿತ ಬಾಳೆಯಂತೆ ಬಾಗಬೇಕು. ದೇವರಿಗೆ ಕೊಡುವುದೂ ಗೊತ್ತು ಕೊಟ್ಟಿದ್ದನ್ನು ಕಿತ್ತುಕೊಳ್ಳುವುದು ಗೊತ್ತು. ಮನುಷ್ಯ ಬಹಳಷ್ಟು ಎಚ್ಚರಿಕೆಯಿಂದ ಧರ್ಮ ಮಾರ್ಗದಲ್ಲಿ ನಡೆಯಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ನಿರೂಪಿಸಿದ್ದಾರೆ. ಅಂಗ ಅವಗುಣಗಳನ್ನು ದೂರ ಮಾಡಿ ಲಿಂಗ ಗುಣ ಸಂಪನ್ನನಾಗಲು ಶ್ರೀ ಗುರುವಿನ ಜ್ಞಾನ ಬೋಧಾಮೃತ ಅವಶ್ಯಕವೆಂದರು.

ರಾಷ್ಟ್ರ ಪ್ರಶಸ್ತಿ ವಿಜೇತ ಅಥಣಿಯ ಬಸವರಾಜ ಉಮ್ರಾಣಿ ಮಾತನಾಡಿ, ಮನುಷ್ಯ ಪ್ರಯತ್ನಕ್ಕೆ ಸರಿ ಸಾಟಿಯಾದುದು ಇನ್ನೊಂದಿಲ್ಲ. ಕಣ್ಣಿದ್ದವರಿಗಿಂತ ಕಣ್ಣಿಲ್ಲದವರಲ್ಲಿ ಹೆಚ್ಚಿನ ಜ್ಞಾಪಕ ಶಕ್ತಿ, ಕ್ರಿಯಾಶಕ್ತಿ ಮನೆ ಮಾಡಿ ಕೊಂಡಿರುತ್ತದೆ. ಸಾಧನೆಯ ಮಾರ್ಗದಲ್ಲಿ ಗಟ್ಟಿಯಾಗಿ ಹೆಜ್ಜೆ ಇಟ್ಟರೆ ಯಶಸ್ಸು ನಿಶ್ಚಿತವೆಂದರು.

ಕಣ್ವಕುಪ್ಪಿ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ಧರ್ಮದಲ್ಲಿ ಸಂಸ್ಕಾರಕ್ಕೆ ಬಹಳಷ್ಟು ಆದ್ಯತೆ ಕೊಟ್ಟಿದೆ. ಸಂಸ್ಕೃತಿ, ಸಭ್ಯತೆ ಉಳಿಯಲು ಸಂಸ್ಕಾರದ ಅವಶ್ಯಕತೆಯಿದೆ. ಸರಿಯಾದ ಸಂಸ್ಕಾರವಿಲ್ಲದ ಕಾರಣ ಯುವ ಜನಾಂಗ ದಾರಿ ತಪ್ಪುತ್ತಿದ್ದಾರೆ. ಅವರನ್ನು ತಿದ್ದಿ ತೀಡಿ ಸನ್ಮಾರ್ಗಕ್ಕೆ ತರುವ ಜವಾಬ್ದಾರಿ ಎಲ್ಲರ ಮೇಲೂ ಇದೆಯೆಂದರು.

ಎಸ್.ಹೆಚ್. ಪಾಟೀಲ, ಗಜಾಪುರದ ವೀರಯ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ನಿವೃತ್ತ ಶಿಕ್ಷಕ ಮಲ್ಲಿಕಾರ್ಜುನ ದೇವಾಂಗದ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಮಾರಿ ವರ್ಷಿಣಿ ಸಾಲಿಮಠ ಭರತ ನಾಟ್ಯ ಪ್ರದರ್ಶಿಸಿದರು.

ಶ್ರೀಮತಿ ಶಾಂತಕುಮಾರಿ ಸ್ವಾಗತಿಸಿದರು. ಕಾಂತರಾಜ ಮತ್ತು ವೀರೇಶ ಸಂಗಡಿಗರಿಂದ ಸಂಗೀತ ಸೇವೆ ಜರುಗಿತು. ಶಿಕ್ಷಕ ಕೊಟ್ರೇಶಪ್ಪ ನಿರೂಪಿಸಿದರು. ಗಜಾಪುರ ಸುಲಫಲದೇವರ ಮಠದ ರೇಣುಕ ಪ್ರಸಾದ ಸಹೋದರರು ಅನ್ನ ದಾಸೋಹ ನೆರವೇರಿಸಿದರು.

# ಕೊಂಡಜ್ಜಿ ರಸ್ತೆಯ ಸಾಯಿಬಾಬಾ ಮಂದಿರದಲ್ಲಿ ವ್ಯಾಸ ಪೌರ್ಣಿಮೆ ಮಹೋತ್ಸವ



ಕೊಂಡಜ್ಜಿ ರಸ್ತೆಯ ವಿಜಯನಗರ ಬಡಾವಣೆಯ ಶ್ರೀ ಶಿರಡಿ ಸಾಯಿಬಾಬಾ ಸೇವಾ ಸಂಸ್ಥೆ ವತಿಯಿಂದ ಶ್ರೀ ಶಿರಡಿ ಸಾಯಿ ಬಾಬಾರವರ 7ನೇ ವರ್ಷದ ಗುರು ಪೂಜೆ, ವ್ಯಾಸ ಪೌರ್ಣಿಮೆ ಮಹೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 5.30ಕ್ಕೆ ಕಾಕಡಾರತಿ, 8.30ಕ್ಕೆ, ಸಾಮೂಹಿಕ ಅಭಿಷೇಕ, ಬೆಳಿಗ್ಗೆ 9.30ಕ್ಕೆ ಮಹಾಮಂಗಳಾರತಿ, 10 ಗಂಟೆಗೆ ಹೋಮ ಕಾರ್ಯಕ್ರಮ, 11ಕ್ಕೆ ಶ್ರೀ ಸಾಯಿ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30 ಮಹಾ ಮಂಗಳಾರತಿ ನಂತರ ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ಧೂಪಾರತಿ, 7.30ಕ್ಕೆ ಸಾಯಿ ಭಜನಾ ಕಾರ್ಯಕ್ರಮ, 9.30ಕ್ಕೆ ಶೇಜಾರತಿ ನಡೆಯಲಿವೆ. ಬೆಳಗ್ಗೆ 9 ರಿಂದ ಮಧ್ಯಾಹ್ನ 12 ರ ವರೆಗೆ ಶ್ರೀ ಸಾಯಿಬಾಬಾರವರಿಗೆ ಸಾಮೂಹಿಕ ಅಭಿಷೇಕ ನಡೆಯಲಿದೆ. ಪೂರ್ಣಾಹುತಿ ಹೋಮ ಮತ್ತು ಅನ್ನ ಸಂತರ್ಪಣೆ ಉದ್ಘಾಟನೆಯನ್ನು ಶಾಸಕ ಶಾಮನೂರು ಶಿವಶಂಪರಪ್ಪ, ಜ್ಯೋತಿ ಉದ್ಘಾಟನೆಯನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ ಆಗಮಿಸಲಿದ್ದಾರೆ ಎಂದು ಮಂದಿರದ ಅಧ್ಯಕ್ಷ ಗುರುದೇವ್ ಸ್ವಾಮೀಜಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕ್ಯಾಂಪಸ್ ಸಂದರ್ಶನ

ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಹಾಗೂ ಎಸ್ ಬಿ ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲೇಜಿನಲ್ಲಿ ಇಂದು ಮತ್ತು ನಾಳೆ ಟೆಕ್ ಮಹೀಂದ್ರ ಮತ್ತು ಆಸ್ಪಿರ್ ಐಟಿ ಸಲ್ಯೂಷನ್ಸ್ ಕಂಪನಿಗಳಿಂದ ಕ್ಯಾಂಪಸ್ ಸಂದರ್ಶನವಿದೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

# ಎಸ್ಸಿ/ಎಸ್ಟಿ ಸಮುದಾಯಕ್ಕೆ ಶವಸಂಸ್ಕಾರ ಸಹಾಯ ಧನ ನೀಡಲು ಹಿಂದೇಟು

## ಹರಿಹರ : ಎಸ್ಸಿ, ಎಸ್ಟಿ ಕುಂದು-ಕೊರತೆ ಸಭೆಯಲ್ಲಿ ಮುಖಂಡರ ಆಕ್ರೋಶ



ಹರಿಹರ, ಜು.2- ಎಸ್ಸಿ, ಎಸ್ಟಿ ವರ್ಗದ ಬಡವರು ಮೃತಪಟ್ಟರೆ ಶವಸಂಸ್ಕಾರಕ್ಕೆ ಸಹಾಯ ಧನ ನೀಡಲು ಗ್ರಾ.ಪಂ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆಂದು ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಆರೋಪಿಸಿದರು.

ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊನ್ನೆ ನಡೆದ ಎಸ್ಸಿ, ಎಸ್ಟಿ ಕುಂದು-ಕೊರತೆ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶೇ.24.10 ಅನುದಾನ ಎಸ್ಸಿ, ಎಸ್ಟಿ ವರ್ಗದವರ ಕಲ್ಯಾಣಕ್ಕಾಗಿಯೇ ಇದೆ. ಈ ಅನುದಾನದಲ್ಲಿ ಅರ್ಹರಿಗೆ ಶವಸಂಸ್ಕಾರಕ್ಕೆ ಅನುದಾನ ನೀಡಬಹುದಾಗಿದೆ.

ಆದರೆ, ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಬಹುತೇಕ ಗ್ರಾ.ಪಂ.ಗಳಲ್ಲಿ ಈ ಅನುದಾನ ನೀಡುತ್ತಿಲ್ಲ. ಕೆಲವು ಗ್ರಾ.ಪಂ.ಗಳಲ್ಲಿ ಐದು ಸಾವಿರ ರೂ. ಬದಲು ಒಂದು ಅಥವಾ ಎರಡು ಸಾವಿರ ರೂ.ಗಳನ್ನು ಮಾತ್ರ ನೀಡುತ್ತಿದ್ದಾರೆ. ಇದರಿಂದ ಈ ವರ್ಗದ ಬಡ ವರ್ಗದವರಲ್ಲಿ ಮರಣ ಉಂಟಾದರೆ ಖರ್ಚು, ವೆಚ್ಚಕ್ಕೆ ಬಡ್ಡಿಯಂತೆ ಹಣ ತರಬೇಕಾಗಿದೆ. ಅರ್ಹರಿಗೆ ಈ ಅನುದಾನ ನೀಡುವಂತೆ ಗ್ರಾ.ಪಂ ಪಿಡಿಓ, ಕಾರ್ಯದರ್ಶಿ ಹಾಗೂ ಆಡಳಿತ ನಡೆಸುವ ಜನಪ್ರತಿನಿಧಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಆಗ್ರಹಿಸಿದರು.

ಬೆಳ್ಳೂಡಿ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಸಮುದಾಯ ಭವನ ಕಾಮಗಾರಿ ನಾಲ್ಕೈದು ವರ್ಷಗಳಿಂದ ನಡೆಯುತ್ತಿದೆ. ಆದರೆ, ಈವರೆಗೂ ಪೂರ್ಣಗೊಂಡಿಲ್ಲ. ಅನುದಾನ ಬಿಡುಗಡೆಯಾಗಿದ್ದರೂ ಸಂಬಂಧಿತ ಅಧಿಕಾರಿ ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯದಿಂದಾಗಿ ಆ ಗ್ರಾಮದ ದಲಿತರಿಗೆ ಸಮುದಾಯ ಭವನದ ಸೌಲಭ್ಯ ಸಿಗುತ್ತಿಲ್ಲ ಎಂದರು.

ತಾಲ್ಲೂಕಿನ ಬನ್ನಿಕೋಡು ಹಾಗೂ ವಿವಿಧ ಗ್ರಾಮಗಳಲ್ಲಿ ದಲಿತ ಸಮುದಾಯದವರಿಗೆ ಶವಸಂಸ್ಕಾರಕ್ಕೆ ರುದ್ರಭೂಮಿ ಸೌಲಭ್ಯ ಇಲ್ಲದಂತಾಗಿದೆ. ಕೆಲವಡೆ ರುದ್ರಭೂಮಿ ಜಾಗದ ಪ್ರಕರಣ ಕೋರ್ಟ್‌ನಲ್ಲಿದ್ದರೆ, ಇನ್ನೂ ಕೆಲವೆಡೆ ರಸ್ತೆಯ ಸಮಸ್ಯೆ ಇದೆ. ಹೀಗಾಗಿ ಶವಸಂಸ್ಕಾರವನ್ನು ನದಿ, ಹಳ್ಳ, ಕೊಳ್ಳಗಳ ದಡದಲ್ಲಿ ರಸ್ತೆ ಬದಿಯಲ್ಲಿ ಮಾಡುವ ಹೀನಾಯ ಸ್ಥಿತಿ ಇದೆ. ಗ್ರಾಮೀಣ ಭಾಗದಲ್ಲಿ ವಸತಿ ರಹಿತರ ದೊಡ್ಡ ಸಂಖ್ಯೆ ಇದೆ. ಅವರಿಗೆ ಯಾವುದಾದರು ಯೋಜನೆಯಲ್ಲಿ ವಸತಿ ವ್ಯವಸ್ಥೆ ಮಾಡಬೇಕಿದೆ ಎಂದು ಆಗ್ರಹಿಸಿದರು.

ದಸಂಸ ಜಿಲ್ಲಾ ಸಂಚಾಲಕ ಕುಂದವಾಡ ಮಂಜುನಾಥ ಮಾತನಾಡಿ ಎಸ್ಸಿ, ಎಸ್ಟಿ ಶಾಲಾ-ಕಾಲೇಜು ವಿದ್ಯಾರ್ಥಿಗಳ ಪಠ್ಯ ಪುಸ್ತಕ ಇತರೆ ಸಲಕರಣೆಗಳ ಖರೀದಿಗೂ ಶೇ.24.10 ಅನುದಾನ ಬಳಕೆ ಮಾಡಬಹುದಾಗಿದೆ. ವಿದ್ಯಾರ್ಥಿಗಳಿಗೆ ಈ ಅನುಕೂಲ ಸಿಕ್ಕರೆ ಅವರು ಶೈಕ್ಷಣಿಕವಾಗಿ ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಗುತ್ತೂರಿನ ಪೈಲ್ವಾನ್ ಶಿವರಾಜ್ ಬಿ. ಮಾತನಾಡಿ, ಗುತ್ತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಳೆ ಬಂದಾಗ ನೀರು ನುಗ್ಗಿ ವಿದ್ಯಾರ್ಥಿಗಳಿಗೆ ಶಾಲೆಗೆ ಬಂದು ಹೋಗಲು ತೊಂದರೆಯಾಗುತ್ತಿದೆ. ಗ್ರಾಮದ ಎ.ಕೆ.ಕಾಲೋನಿಯ ಅಂಗನವಾಡಿ ಮುಂದೆ ಕಸ, ಕಡ್ಡಿ ಇದ್ದು ಸ್ವಚ್ಚತೆ ಕಾಪಾಡಬೇಕಿದೆ ಎಂದು ಹೇಳಿದರು.

ಪಿಎಸ್‌ಐ ಅರವಿಂದ ಬಿ.ಎಸ್. ಮಾತನಾಡಿ, ಈ ಸಭೆಯಲ್ಲಿ ಪ್ರಸ್ತಾವನೆಯಾದ ಸಮಸ್ಯೆಗಳನ್ನು ಸಂಬಂಧಿತ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ಗಮನ ಸೆಳೆಯಲಾಗುವುದೆಂದರು.

ಶಾಮನೂರಿನ ಕಣ್ಣಾಳ ಅಂಜಿನಪ್ಪ, ಬನ್ನಿಹಟ್ಟಿ ನಿಂಗರಾಜ್, ದೊಡ್ಡಪ್ಪ, ಪ್ರದೀಪ್ ಕೆ.ಟಿ.ಜೆ. ನಗರ, ನಾಗರಾಜ್ ಚಿತ್ತಾನಹಳ್ಳಿ, ಆನಂದ, ನಾಗಣ್ಣ, ಗುತ್ತೂರಿನ ದುರ್ಗೇಶ್ ಪೈ., ಕಿರಣ್, ರಘು, ಸುನೀಲ್ ಬನ್ನಿಕೋಡು ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಚುನಾವಣೆಗಳಲ್ಲಿ ಭ್ರಷ್ಟಾಚಾರ ಪ್ರಾರಂಭ

**(1ನೇ ಪುಟದಿಂದ)** ಮತದಾರ ಹಣ ಕೇಳಿ ಅಭ್ಯರ್ಥಿಗಳನ್ನ ಭ್ರಷ್ಟರನ್ನಾಗಿಸಿದರು. ಪ್ರಾಮಾಣಿಕರನ್ನು ಆಯ್ಕೆ ಮಾಡಿದರೆ ಭ್ರಷ್ಟಾಚಾರ ಮುಕ್ತ ಸರ್ಕಾರದ ಆಡಳಿತ ನಡೆಯುತ್ತದೆ.

ಕೋಳಿ ಮೊದಲ, ತತ್ತಿ ಮೊದಲ ಎನ್ನುವ ಪರಿಸ್ಥಿತಿ ದೇಶಾದ್ಯಂತ ಇದೆ. ಇದಕ್ಕೆ ಯಾರು ಕಾರಣ ಎನ್ನುವುದನ್ನು ಬಿಟ್ಟು ವ್ಯವಸ್ಥೆಯನ್ನು ಸರಿಪಡಿಸುವ ಕಾರ್ಯ ನಡೆಯಬೇಕು. ಸರ್ಕಾರಿ ಕಛೇರಿಗಳಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ಬೇಕು. ಅದಕ್ಕೆ ಜನಪ್ರತಿನಿಧಿಗಳು ಪ್ರಾಮಾಣಿಕರಾಗಬೇಕು. ಸ್ವಾತಂತ್ರ್ಯಕ್ಕಾಗಿ ನಡೆಸಿದ ಆಂದೋಲನದಂತೆ ಹೋರಾಟ ನಿರಂತರ ನಡೆದರೆ ಮುಂದೊಂದು ದಿನ ಯಶಸ್ಸು ಸಿಗಲಿದೆ ಮುಂತಾದ ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾದವು.

ಮಾಜಿ ಶಾಸಕ ಅರುಣಕುಮಾರ ಪೂಜಾರ, ಡಾ. ಬಸವರಾಜ ಕೇಲಗಾರ, ಮಂಜನಗೌಡ ಪಾಟೀಲ, ಶೇರು ಕಾಬೂಲಿ, ಸಣ್ಣತಮ್ಮಪ್ಪ ಬಾರ್ಕಿ, ಬಿ.ಬಿ.ನಂದ್ಯಾಲ, ವಿಜಯ ಬ್ಯಾಡಗಿ, ಪ್ರಕಾಶ ಜಂಬಗಿ, ವಿ.ಪಿ ಲಿಂಗನಗೌಡ, ಕುಮಾರ ಜಂಬಗಿ, ಪೃಥ್ವಿರಾಜ ಜೈನ್, ಪ್ರಭು ಹಲಗೇರಿ, ಜಿ.ಜಿ. ಹೊಟ್ಟಿಗೌಡ್ರ, ಬಸವರಾಜ ಕೇಲಗಾರ, ಪ್ರಕಾಶ ಜೈನ್, ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳು, ನಿವೃತ್ತ ನೌಕರರು, ವರ್ತಕರು, ಕಾಂಗ್ರೆಸ್, ಬಿಜೆಪಿ ಮುಖಂಡರು ಬಾಗವಹಿಸಿದ್ದರು.

## ಉಪ ಚುನಾವಣೆ

ಶೀಘ್ರದಲ್ಲಿಯೇ ಬರಲಿರುವ ರಾಣೇಬೆನ್ನೂರು ನಗರಸಭೆಯ 22 ನೇ ವಾರ್ಡ್ ನ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಮತದಾರರಿಗೆ ಯಾವುದೇ ಆಸೆ ಅಮಿಷಗಳನ್ನೊಡ್ಡದೆ ಮತ ಯಾಚಿಸುವ ನಿರ್ಣಯ ಕೈಗೊಳ್ಳುವ ನಿರ್ಧಾರವನ್ನು ಅರುಣಕುಮಾರ ಪೂಜಾರ ಹಾಗೂ ಕೆ.ಬಿ. ಕೋಳಿವಾಡ ಘೋಷಿಸಿದರು. ಜೊತೆಗೆ ಇನ್ನಿತರೆ ರಾಜಕೀಯ ಪಕ್ಷದವರು ಹಾಗೂ ಪಕ್ಷೇತರರು ಕಣದಲ್ಲಿದ್ದರೆ ಅವರ ಮನವೊಲಿಸಿ ಭ್ರಷ್ಟಾಚಾರ ರಹಿತ ಹಾಗೂ ಕಡ್ಡಾಯ ಮತದಾನದ ಪ್ರಯತ್ನ ಮಾಡಿಸುವ ನಿರ್ಣಯ ಕೈಗೊಳ್ಳಲಾಯಿತು.

# ದೇಹದಾನ, ಅಂಗಾಂಗ ದಾನ, ರಕ್ತದಾನ: ಎಸ್.ಎಸ್. ಆಸ್ಪತ್ರೆಯಿಂದ ಜನಜಾಗೃತಿ



ದಾವಣಗೆರೆ, ಜು. 2- ರಾಷ್ಟ್ರೀಯ ವೈದ್ಯರ ದಿನಾಚರಣೆ ಪ್ರಯುಕ್ತ ನಗರದ ಎಸ್.ಎಸ್. ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ವಿದ್ಯಾರ್ಥಿ ಸಂಘದ ಕನ್ನಡ ಬಳಗ, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ವತಿಯಿಂದ ನಗರದ ರೈಲ್ವೆ, ಬಸ್‌ನಿಲ್ದಾಣ, ಮಹಾನಗರ ಪಾಲಿಕೆ ಆವರಣಗಳಲ್ಲಿ ದೇಹದಾನ, ಅಂಗಾಂಗ ದಾನ, ರಕ್ತದಾನ ಮತ್ತು ವೈದ್ಯರ ವಿರುದ್ಧ ಹಲ್ಲೆ ತಡೆಗಟ್ಟುವ ಕುರಿತು ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಎಸ್. ಪ್ರಸಾದ್, ವೈದ್ಯಕೀಯ ನಿರ್ದೇಶಕ ಡಾ. ಅರುಣ್‌ಕುಮಾರ್ ಅಜ್ಜಪ್ಪ, ಉಪ ಪ್ರಾಂಶುಪಾಲರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ಅವರು ರಕ್ತದಾನದ, ದೇಹದಾನ, ಅಂಗಾಂಗ ದಾನ ಮತ್ತು ವೈದ್ಯರ ವಿರುದ್ಧ ಹಲ್ಲೆಯನ್ನು ತಡೆಗಟ್ಟುವುದರ ಮಹತ್ವದ ಬಗ್ಗೆ ತಿಳಿಸಿದರು.

ಅಂಗರಚನಾ ಶಾಸ್ತ್ರ ದೇಹದಾನ ಸಂಸ್ಥೆ (ಎಸ್.ಎಸ್. ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರ) ಕಾರ್ಯದರ್ಶಿ ಡಾ.ವೀರೇಶ್ ಇಟಗಿ ಮಾತನಾಡಿ, ದೇಹದಾನದ ಮಹತ್ವ ಹಾಗೂ ದೇಹದಾನದ ಪ್ರಕ್ರಿಯೆ, ನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಬಾಪೂಜಿ ವಿದ್ಯಾಸಂಸ್ಥೆ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರುಗಳ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಸಂಘದ ಛೇರ್ಮನ್ ಡಾ. ಹರೀಶ್ ಕುಮಾರ್ ವೈದ್ಯರುಗಳಾದ ಡಾ. ಕವಿತಾ ಜಿ. ಯು, ಡಾ. ರಘುಕುಮಾರ್, ಡಾ. ಕಾಂಚನ ಎಸ್, ಡಾ. ಆಶಾ ಎಚ್.ಎನ್, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಗುರು ಸ್ಮರಣೆ

ಗುರುವೇ
ಬರಿದಾದ ಒಡಲಲ್ಲಿ ಪ್ರೀತಿ ವಿಶ್ವಾಸವ ತುಂಬಿದಿರಿ
ಜ್ಞಾನಧಾರೆಯ ಹರಿಸಿ
ಕಾಯಕ ಮಾರ್ಗವ ಕಲಿಸಿ
ಉನ್ನತಿಯ ಹಾದಿಗೆ ನಾಂದಿ ಹಾಡಿದಿರಿ
ನಮೋ ಗುರುವೇ ನಿಮಗೆ
ನನ್ನ ನಮನ !

ಪಾಠ-ಆಟಗಳ ಜೊತೆ ಬದುಕುವ ಕಲೆ ಕಲಿಸಿದಿರಿ
ಆರೋಗ್ಯದ ಅರಿವು ಮೂಡಿಸಿದಿರಿ
ಪ್ರಸಾದ ನಿಲಯದಲಿ
ಹೊತ್ತು ಹೊತ್ತಿಗೆ ಅನ್ನವ ನೀಡಿ
ನನ್ನ ನೀವು ಜೋಪಾನ ಮಾಡಿದಿರಿ
ನಿಮಗೆ ವಂದನೆ ಅಭಿನಂದನೆ ಗುರುವೇ !

ನಮ್ಮ ಸುಖಕ್ಕಾಗಿ ಮಾನವೀಯ ಮಂತ್ರಗಳ
ತಿಳಿಸಿಕೊಟ್ಟಿರಿ, ನೀವು ಅವುಗಳನ್ನೆಂದು
ಮರೆಯಲಾರೆ ನಾನು ನನ್ನ ಕನಸುಗಳ
ನನಸಾಗಿಸಿದೆ ನಿಮ್ಮ ಮಾರ್ಗದರ್ಶನ
ನನ್ನ ಬಾಳ ಬೆಳಗುತಿದೆ ಗುರುವೇ !

ನೀವು ನನಗೆ ತೋರಿದ ಪ್ರೀತಿ ವಿಶ್ವಾಸ
ಮಮತೆಯೆಷ್ಟು ನೀವು ನನಗೆ ಮಾಡಿದ
ಸಹಾಯವೆಷ್ಟು ಬಾಯ್ತುಂಬ 'ಗುರು' ಎಂದರೆ
ಸಂದೀತೇ ನಿಮ್ಮ ಋಣ ಸ್ವಲ್ಪವಾದರೂ!!!!
ನಿಮ್ಮ ಋಣವ ನಾ ಹೇಗೆ ತೀರಿಸಲಿ ಗುರುವೇ ?

ಒಂದು ಜನ್ಮದಲಿ ತೀರಿಸಲು ಸಾಧ್ಯವೇ
ತಾಯಿಯ ತ್ಯಾಗದ ಋಣವನು?
ಗುರು ನೀವು ನೀಡಿದ ವಿದ್ಯೆಯನು ?
ಕೈ ಮುಗಿಯುತ ನಮಿಸುವೆ ವಂದಿಸುವೆ
ಪೂಜಿಸುವೆ ಆರಾಧಿಸುವೆ ಗುರುವೇ
ಹೀಗೆ ತೀರಿಸುವೆ ನಾ ನಿಮ್ಮ ಋಣವನು !

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

# ಬಿಳಿಚೋಡು ಆರೋಗ್ಯ ಕೇಂದ್ರ, ನಾಡ ಕಚೇರಿಗೆ ಜಿಲ್ಲಾಧಿಕಾರಿ ಭೇಟಿ



ಜಗಳೂರು, ಜು.2- ತಾಲ್ಲೂಕಿನ ಬಿಳಿಚೋಡು ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಾಡ ಕಚೇರಿಗೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ಸಿಬ್ಬಂದಿಗಳ ಹಾಜರಾತಿ, ಔಷಧಗಳ ದಾಸ್ತಾನು ಪರಿಶೀಲನೆ, ವೈದ್ಯರ ದಿನಚರಿ ಪರಿಶೀಲಿಸಿ ಚಿಕಿತ್ಸೆ ಪಡೆಯಲು ಆಗಮಿಸಿದ್ದ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದರು.

ನಂತರ ಬಿಳಿಚೋಡು ನಾಡ ಕಚೇರಿಗೆ ಭೇಟಿ ನೀಡಿ ಸಾರ್ವಜನಿಕರು ಪಹಣಿ, ಆಧಾರ್ ತಿದ್ದುಪಡಿ, ಗೃಹಜ್ಯೋತಿ ಗ್ಯಾರಂಟಿ ಯೋಜನೆ ನೋಂದಣಿಗೆ ಆಗಮಿಸಿದ್ದ ಜನರ ಅಹವಾಲುಗಳನ್ನು ಆಲಿಸಿದರು. ಅಲ್ಲದೇ ಹೊಸದಾಗಿ ನಿರ್ಮಾಣವಾಗುತ್ತಿರುವ ನಾಡ ಕಚೇರಿ ಕಟ್ಟಡ ಕಾಮಗಾರಿ ಪರಿಶೀಲನೆ ಮಾಡಿದರು. ಈ ವೇಳೆ ತಹಶೀಲ್ದಾರ್ ಸಂತೋಷ್ ಉಪಸ್ಥಿತರಿದ್ದರು.

# ವಚನಕಾರರ ಮೌಲ್ಯಗಳು ಮಾದರಿ

**(1ನೇ ಪುಟದಿಂದ)** ಮಲ್ಲಿಕಾರ್ಜುನ್, ತಾ.ಪಂ ಇಓ ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಬಿಇಓ ಸುರೇಶ್ ರೆಡ್ಡಿ, ಕಸಾಪ ತಾಲ್ಲೂಕು ಅಧ್ಯಕ್ಷೆ ಸುಜಾತಮ್ಮ, ಪ.ಪಂ ಸದಸ್ಯರಾದ ಲುಕ್ಮಾನ್‌ಖಾನ್, ಮಂಜುನಾಥ್, ಮಹಮ್ಮದ್ ಅಲಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಗರದ ಗೀತಾ ಮಂದಿರದಲ್ಲಿ ಇಂದು ಗುರು ಪೌರ್ಣಿಮೆ

ಪಿ.ಬಿ. ರಸ್ತೆಯಲ್ಲಿರುವ ಆರ್.ಹೆಚ್. ಗೀತಾ ಮಂದಿರದಲ್ಲಿ ಇಂದು ಸಂಜೆ 5 ಕ್ಕೆ ಗುರು ಪೌರ್ಣಿಮೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರೇಣುಕಾ ಮಾತಾಜಿ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಪುಣ್ಯಕೋಟಿ ಮಠದ ಬಾಲಯೋಗಿ ಶ್ರೀ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೀಲು, ಮೂಳೆ ತಜ್ಞ ಡಾ.ವಿಶ್ವನಾಥ್, ಪ್ರಕೃತಿ ಚಿಕಿತ್ಸಾ ತಜ್ಞರಾದ ಡಾ.ಭುವನೇಶ್ವರಿ ಭಾಗವಹಿಸಲಿದ್ದಾರೆ.

# ನಗರ ದೇವತೆ ಮುಂದೆ ವಾರದ ಸಂತೆ ಯಶಸ್ವಿ

**(1ನೇ ಪುಟದಿಂದ)** ಜವಳಿಕಾಯಿ, ಟೊಮ್ಯಾಟೋ, ಬದನೆಕಾಯಿ, ಕೊತ್ತಂಬರಿ, ಕರಿಬೇವು, ಮೆಂತೆ, ಸಾಸಿವೆ, ಜೀರಿಗೆ, ಸಣ್ಣ ಮಕ್ಕಳಿಗೆ ಬಳೆ, ಹೂವು, ಹಣ್ಣು ಸೇರಿದಂತೆ ಇನ್ನಿತರೆ ಸಾಮಗ್ರಿಗಳನ್ನು ಜನರು ಖರೀದಿ ಮಾಡುತ್ತಿರುವುದು ಕಂಡು ಬಂತು.

ದಾವಣಗೆರೆ ಸುತ್ತಮುತ್ತಲ ಗ್ರಾಮಗಳಾದ ಹದಡಿ, ಬೇತೂರು, ಕಕ್ಕರಗೊಳ್ಳ, ಆವರಗೊಳ್ಳ, ಆನಗೋಡು ಸೇರಿದಂತೆ ಇತರೆಡೆಯಿಂದ ಹಳ್ಳಿಗರು ವ್ಯಾಪಾರಕ್ಕಾಗಿ ದುಗ್ಗಮ್ಮ ದೇವಸ್ಥಾನ ಸನ್ನಿಧಿಗೆ ಬಂದಿದ್ದರು. ಮಳೆ ಬರದಿದ್ದರೆ ದೇವಿ ಮುಂದೆ ಸಂತೆ ನಡೆದರೆ ಮಳೆ ಬರುತ್ತದೆ ಎಂಬ ನಂಬಿಕೆ ಇಲ್ಲಿನ ಭಕ್ತರದ್ದು. ಈ ಹಿನ್ನೆಲೆಯಲ್ಲಿ ಈ ಆಚರಣೆ ಹಿಂದಿನಿಂದಲೂ ನಡೆದು ಬಂದಿದೆ. 1972ರಿಂದಲೂ ಈ ರೀತಿ ಸಂತೆ ನಡೆಸಲಾಗುತ್ತಿದೆ ಎನ್ನಲಾಗಿದೆ.

ಒಟ್ಟಿನಲ್ಲಿ ಭಾನುವಾರ ಸುರಿದ ವರ್ಷಧಾರೆಯಿಂದ ರೈತರ ಮೊಗದಲ್ಲಿ ಸಂತಸ ಮೂಡಿದೆ. ಮುಂದಿನ ಇನ್ನೂ ನಾಲ್ಕು ವಾರಗಳ ಕಾಲ ಸಂತೆ ದೇವಸ್ಥಾನದ ಆವರಣದಲ್ಲಿಯೇ ನಡೆಯಲಿದೆ.

ಹೂವಿನ ವ್ಯಾಪಾರಿ ಎಸ್.ಎನ್. ನಾರಾಯಣಪ್ಪ ಅವರ ಧರ್ಮಪತ್ನಿ

## ಶ್ರೀಮತಿ ಜಯ್ಯಮ್ಮ ನಿಧನ



ದಾವಣಗೆರೆ ಸಿಟಿ ಜಾಲಿನಗರ 2ನೇ ಮುಖ್ಯರಸ್ತೆ, 2ನೇ ಕ್ರಾಸ್ ಪಾರ್ಕ್ ಪಕ್ಕದ ರಸ್ತೆ ವಾಸಿ, ಹೂವಿನ ವ್ಯಾಪಾರಿ ಎಸ್.ಎನ್. ನಾರಾಯಣಪ್ಪ ಅವರ ಧರ್ಮಪತ್ನಿ **ಶ್ರೀಮತಿ ಜಯ್ಯಮ್ಮ** ಅವರು ದಿನಾಂಕ 2-7-2023ರ ಭಾನುವಾರ ರಾತ್ರಿ 9.40 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3-7-2023ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಎಸ್.ಎನ್. ನಾರಾಯಣಪ್ಪ, ಹೂವಿನ ವ್ಯಾಪಾರಿಗಳು ಮತ್ತು ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು. ಮೊ. : 90366 36096

## ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಎನ್.ಜಿ. ಮಂಜುನಾಥ್ ಅವರಿಗೆ ಪತ್ನಿ ವಿಯೋಗ



ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಎನ್.ಜಿ. ಮಂಜುನಾಥ್ ಅವರ ಧರ್ಮಪತ್ನಿ **ಶ್ರೀಮತಿ ನಲ್ಕುದುರೆ ಗೌಡ್ರ ಬಿ. ಬಸಮ್ಮ** ಅವರು ದಿನಾಂಕ 02.07.2023ರ ಭಾನುವಾರ ತಡರಾತ್ರಿ 1.45ಕ್ಕೆ ನಿಧನರಾದರು. ಮೃತರಿಗೆ ಸುಮಾರು 73 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 03.07.2023ರ ಸೋಮವಾರ ಬೆಳಿಗ್ಗೆ 10 ರವರೆಗೆ ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ 2ನೇ ಹಂತದಲ್ಲಿರುವ ಅವರ ನಿವಾಸದಲ್ಲಿ ಇಡಲಾಗುವುದು. ನಂತರ ಮಧ್ಯಾಹ್ನ 1.30ಕ್ಕೆ ಚನ್ನಗಿರಿ ತಾಲ್ಲೂಕು ನಲ್ಕುದುರೆ ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

# ಶಾಲಾ ಸಮವಸ್ತ್ರ ಪೂರೈಕೆ ಹೊಣೆ

**(1ನೇ ಪುಟದಿಂದ)** ತರಗತಿವರೆಗಿನ ಗಂಡು ಮಕ್ಕಳಿಗೆ ಮತ್ತು ಒಂದರಿಂದ ಏಳನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಸಮವಸ್ತ್ರ, ಎಂಟರಿಂದ 10ನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸೇರಿ ಎರಡು ಜೊತೆ ಸಮವಸ್ತ್ರಕ್ಕೆ ಒಟ್ಟು 1.34 ಲಕ್ಷ ಮೀಟರ್ ಬಟ್ಟೆ ಪೂರೈಸಲು ಶಿಕ್ಷಣ ಇಲಾಖೆಯು ನಿಗಮಕ್ಕೆ ಅನುಮತಿ ನೀಡಿತ್ತು. ಆದರೆ, ನಿಗಮ ಪೂರೈಸಿದ ಬಟ್ಟೆಯು ಕಳಪೆ ಗುಣಮಟ್ಟದ್ದು ಎಂದು ಕೇಂದ್ರ ರೇಷ್ಮೆ ಮಂಡಳಿ ವರದಿ ನೀಡಿತ್ತು.

ಬಹುತೇಕ ಶಾಲೆಗಳಿಗೆ ಈಗಾಗಲೇ ಬಟ್ಟೆಗಳು ತಲುಪಿವೆ. ವಿತರಣೆಯಾಗದೇ ಇರುವ ಶಾಲೆಗಳಿಗೆ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ವಿತರಿಸದೇ ಉಳಿದಿರುವ ಬಟ್ಟೆಯೂ ಸೇರಿ ಎರಡು ಜತೆ ಸಮವಸ್ತ್ರಗಳನ್ನು ತ್ವರಿತವಾಗಿ ಪೂರೈಸಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

# ಮಹಾರಾಷ್ಟ್ರ: ಬಂಡಾಯ

**(1ನೇ ಪುಟದಿಂದ)** ನಂತರವೇ ಪರಿಸ್ಥಿತಿ ಸ್ಪಷ್ಟವಾಗಲಿದೆ ಎಂದಿದ್ದಾರೆ.

ಈ ಬೆಳವಣಿಗೆ ನಂತರ ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿರುವ ಪ್ರತಿಪಕ್ಷಗಳು, ಬಿಜೆಪಿ ವಾಷಿಂಗ್ ಮಷೀನ್ ರೀತಿ ವರ್ತಿಸುತ್ತಿದೆ.

ಬಿಜೆಪಿಗೆ ಕಳಂಕಿತ ನಾಯಕರು ಸೇರ್ಪಡೆಯಾದ ನಂತರ ಅವರ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿಲ್ಲ ಎಂದಿದ್ದಾರೆ.

# ಕೆರೆಗಳ ನಡೆದಾಡುವ ವಿಶ್ವಕೋಶ ಬಸವರಾಜ ಕುಂಚೂರು ಇನ್ನಿಲ್ಲ



ದಾವಣಗೆರೆ, ಜು. 2 - ಸುರತ್ಕಲ್ ನ ಪ್ರತಿಷ್ಠಿತ ರಾಷ್ಟ್ರೀಯ ಇಂಜಿನಿಯರ್ ಕಾಲೇಜಿನಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಬಸವರಾಜ ಕುಂಚೂರು ನಿನ್ನೆ ಸಂಜೆ ನಿಧನರಾಗಿದ್ದಾರೆ. ಕವಿ, ಲೇಖಕ, ಸಂಶೋಧಕರಾಗಿದ್ದ ಬಸವರಾಜ್ 'ಬೆಣ್ಣೆ ಗಡಿಗೆ' ಕವನ ಸಂಕಲನ, ನಮ್ಮೂರ ಕೆರೆಗಳು, ಕುಂಬಾರಿಕೆ ಪದಕೋಶ, ಕುಂಭಕಲೆ, ಕೆರೆ ಪದಕೋಶ ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದರು.

ದಾವಣಗೆರೆ ಜಿಲ್ಲೆಯ ಕೆರೆಗಳ ಬಗ್ಗೆ ಆಳವಾದ ಅಧ್ಯಯನ, ಸಂಶೋಧನೆ ಫಲವಾಗಿ 'ನಮ್ಮ ಕೆರೆಗಳು ಸಾಂಪ್ರದಾಯಿಕ ಜಲಕನ್ನಡಿಗಳು' ಎಂಬ 700 ಪುಟಗಳಿಗೂ ಹೆಚ್ಚಿನ ಬೃಹತ್ ಕೃತಿ ಅವರ ಆಸಕ್ತಿಯ ದ್ಯೋತಕವಾಗಿದೆ. ಬೀಚಿ ಸಾಹಿತ್ಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿಗಳು ಸೇರಿದಂತೆ ಹಲವು ಗೌರವಗಳಿಗೆ ಪಾತ್ರರಾಗಿದ್ದರು.

ನಗರದ ಸ್ವಾಮಿ ವಿವೇಕಾನಂದ ಬಡಾವಣೆಯ ನಾಲ್ಕನೇ ಕ್ರಾಸ್‌ನಲ್ಲಿ ವಾಸಿಸುತ್ತಿದ್ದ ಬಸವರಾಜ್ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ಅವರಿಗೆ 82 ವಯಸ್ಸಾಗಿತ್ತು. ಅವರ ಪುತ್ರ ನೈಜೀರಿಯಾ ದೇಶದಲ್ಲಿರುವುದರಿಂದ ನಾಳೆ ದಾವಣಗೆರೆಗೆ ಆಗಮಿಸಿದ ನಂತರ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ನಿರ್ಮಾಪಕರ ಸಂಘದ ಪದಾಧಿಕಾರಿಗಳಿಂದ ಸಿಎಂ ಭೇಟಿ ; ಚಿತ್ರರಂಗದ ಸಮಸ್ಯೆಗಳ ಚರ್ಚೆ



ಬೆಂಗಳೂರು, ಜು. 2- ಚಲನಚಿತ್ರ ನಿರ್ಮಾಪಕರ ಸಂಘದ ಪದಾಧಿಕಾರಿಗಳು, ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷ ಸಾ.ರಾ. ಗೋವಿಂದು ಅವರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಚಿತ್ರರಂಗಕ್ಕೆ ಸಂಬಂಧಪಟ್ಟಂತಹ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು ಎಂದು ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ತಿಳಿಸಿದರು.

ಬಾಕಿ ಉಳಿದುಕೊಂಡಿರುವ ಸಬ್ಸಿಡಿ ಹಣ, ರಾಜ್ಯ ಪ್ರಶಸ್ತಿಗಳು, ಮುಚ್ಚುತ್ತಿರುವ ಚಿತ್ರಮಂದಿರಗಳ ಪರಿಸ್ಥಿತಿ, ಮೈಸೂರಿನಲ್ಲಿ ಚಿತ್ರನಗರಿ, ಪೈರಸಿಯಿಂದ ಉದ್ಯಮಕ್ಕೆ ಆಗುತ್ತಿರುವ ನಷ್ಟ, ತೆರಿಗೆಯಿಂದ ಆಗುತ್ತಿರುವ ಸಮಸ್ಯೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ಸುದೀರ್ಘವಾದಂತಹ ಚರ್ಚೆ ಮಾಡಿ ಸಮಗ್ರ ಸಮಸ್ಯೆಗಳ ಚರ್ಚೆಗೆ ಸಮಯವನ್ನು ನಿಗದಿಪಡಿಸಿ ಪರಿಹಾರಕ್ಕೆ ಅಧಿಕಾರಿಗಳೊಂದಿಗೆ ಅತಿ ಶೀಘ್ರದಲ್ಲೇ ದಿನಾಂಕವನ್ನು ನಿಗದಿಪಡಿಸುತ್ತೇನೆಂದು ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವುದನ್ನು ಈ ಸಂದರ್ಭದಲ್ಲಿ ಬಣಕಾರ್ ತಿಳಿಸಿದರು.

ನಿರ್ಮಾಪಕರ ಸಂಘದ ಕಾರ್ಯದರ್ಶಿ ಪ್ರವೀಣ್ ಕುಮಾರ್ (ಡಿ.ಕೆ. ರಾಮಕೃಷ್ಣ), ಉಪಾಧ್ಯಕ್ಷರಾದ ಎಂ.ಜಿ. ರಾಮಮೂರ್ತಿ, ನಿರ್ಮಾಪಕ ಎನ್. ಎಂ,ಸುರೇಶ್ ಅವರು ನಿಯೋಗದಲ್ಲಿ ಇದ್ದರು.

# ರೈತ ಸಂಪರ್ಕ ಕೇಂದ್ರದಲ್ಲಿ ಬೀಜಗಳಿಗಾಗಿ ಮುಗಿ ಬಿದ್ದ ರೈತರು



ಮಲೇಬೆನ್ನೂರು, ಜು. 2 - ಗುರುವಾರ ಹದ ಮಳೆ ಆದ ಹಿನ್ನೆಲೆಯಲ್ಲಿ ಶುಕ್ರವಾರ ಮಲೇಬೆನ್ನೂರಿನ ರೈತ ಸಂಪರ್ಕ ಕೇಂದ್ರದಲ್ಲಿ ರೈತರು ಬಿತ್ತನೆ ಬೀಜಗಳಿಗಾಗಿ ಅಗತ್ಯ ದಾಖಲೆಗಳೊಂದಿಗೆ ಮುಗಿ ಬಿದ್ದಿದ್ದರು.

# ಪರಿಸರ ರಕ್ಷಿಸುವ ನೆಪದಲ್ಲಿ ಎಷ್ಟು ಗಿಡಗಳನ್ನು ಬೆಳೆಸಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಿ

## ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಕಿವಿಮಾತು

ದಾವಣಗೆರೆ, ಜು. 2 - ಪರಿಸರ ರಕ್ಷಿಸುವ ಬಗ್ಗೆ ಬರೀ ಮಾತನಾಡದೆ ವರ್ಷದಲ್ಲಿ ಎಷ್ಟು ಗಿಡಗಳನ್ನು ನೆಟ್ಟಿದ್ದೇವೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಕರೆ ನೀಡಿದರು.

ನಗರದ ಶ್ರೀ ಅನ್ನದಾನೇಶ್ವರ ಶಾಖ ಮಠದಲ್ಲಿ ಮೊನ್ನೆ ಏರ್ಪಡಿಸಿದ್ದ 259ನೇ ಶಿವಾನುಭವ ಸಂಪದ ಹಾಗೂ ಪರಿಸರ ದಿನಾಚರಣೆಯ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಾಲುಮರದ ತಿಮ್ಮಕ್ಕನ ಬಗ್ಗೆ ನಾವು ಮಾತನಾಡುತ್ತೇವೆ. ನಾವು ಅವರಂತೆ ಗಿಡಗಳನ್ನು ಬೆಳೆಸಿದ್ದೇವೆಯೇ ಎಂದು ನಮ್ಮ ಮನಸ್ಸನ್ನು ನಾವೇ ಪ್ರಶ್ನಿಸಿಕೊಳ್ಳಬೇಕೆಂದು ನುಡಿದು ಬೇಗ ಶ್ರೀಮಂತರಾಗಬೇಕು, ಹಣವಂತರಾಗ ಬೇಕೆಂದು ಭಾವಿಸಿ ಸುಂದರವಾದ ಭೂಮಿಗೆ ರಸಗೊಬ್ಬರ ಹಾಕಿ ಬೆಳೆ ಬೆಳೆಯುವುದರಿಂದ ನಿತ್ಯವೂ ವಿಷವನ್ನು ಸೇವಿಸುತ್ತೇವೆ ಎಂದರು.

ಇರುವ ಸ್ವಲ್ಪ ಭೂಮಿಯಲ್ಲಾದರೂ ನಿಮ್ಮ ಮನೆಯವರ ಆಹಾರಕ್ಕಾಗಿ ಸಾವಯವ ಗೊಬ್ಬರದಿಂದ ಆಹಾರ ಪಡಿತರಗಳನ್ನು ಬೆಳೆಯಿರಿ. ಎಲ್ಲಾ ಭೂಮಿಯನ್ನು ನೀರಾವರಿ ಮಾಡಿ ಜಮೀನನ್ನು ಬಂಜರು ಮಾಡದೆ ಪರಿಸರವನ್ನು ರಕ್ಷಿಸಿ ಉಳಿಸಿ ಬೆಳೆಸಬೇಕೆಂದರು.




ಗಿಡಕ್ಕೆ ನೀರು ಹಾಕುವುದರ ಮೂಲಕ ಪರಿಸರ ದಿನಾಚರಣೆಯನ್ನು ಉದ್ಘಾಟಿಸಿದ ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಸಂಸ್ಥಾಪಕ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಇವರು ವಚನಗಳಲ್ಲಿ ಪ್ರಕೃತಿಯ ಪ್ರೇಮ ವಿಷಯವಾಗಿ ಉಪನ್ಯಾಸ ನೀಡುತ್ತಾ 12ನೇ ಶತಮಾನದ ಶರಣರು ಪರಿಸರ ರಕ್ಷಣೆಗಾಗಿ ವಚನಗಳಲ್ಲಿ ಸಾಕಷ್ಟು ಉದಾಹರಣೆ ಸಮೇತ ವಿವರಿಸಿದ್ದಾರೆ. ಪರಿಸರ ರಕ್ಷಿಸುವ ನೆಪದಲ್ಲಿ ಮನೋಮಾಲಿನ್ಯಕ್ಕೆ ಮನುಷ್ಯ ಹೆಚ್ಚು ಒತ್ತು ಕೊಟ್ಟಿದ್ದರಿಂದ ನೆಮ್ಮದಿಯನ್ನು ಕಳೆದುಕೊಂಡಿದ್ದಾನೆಂದು ನುಡಿದರು.

ಬದುಕು ನಡೆಸುವತ್ತ ಮನುಷ್ಯ ಒತ್ತಡದಲ್ಲಿ ಜೀವಿಸುತ್ತಾ ಅಸೂಯೆ, ದುರಾಸೆ, ದ್ವೇಷ, ಅಪ್ರಾಮಾಣಿಕತೆಯಿಂದ ಹೊರ ಬರಬೇಕೆಂದರೆ, ಪ್ರೀತಿ, ಸಮಚಿತ್ತತೆ, ಏಕತೆ, ಸಜ್ಜನರ ಸಹವಾಸ ದಂತಹ ದಿವ್ಯ ಔಷಧಿಯ ಮೊರೆ ಹೋಗಬೇಕು. ಇಲ್ಲದಿದ್ದರೆ ಮನುಷ್ಯ ತಾನೂ ವಿನಾಶದತ್ತ ಹೋಗುವುದರ ಜೊತೆಗೆ ಪರಿಸರ ನಾಶಕ್ಕೆ ನಾವೇ ಕಾರಣರಾಗುತ್ತೇವೆ ಎಂದರು.

ನಮ್ಮ ಉಳಿವಿಗಾಗಿ ಪರಿಸರವನ್ನು ನಾವೇ ರಕ್ಷಿಸಿಕೊಳ್ಳಬೇಕು. ತಂಬಾಕು ಸೇವನೆ, ಕುಡಿತದ ದಾಸರಾಗದೆ ನಡೆ ನುಡಿ ಒಂದಾಗುತ್ತಾ ಶರಣರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.


ಇದೇ ಸಂದರ್ಭದಲ್ಲಿ 75 ವರ್ಷಗಳನ್ನು ಪೂರೈಸಿದ ನಗರದ ವಿನಾಯಕ ಸ್ಟೀಲ್ ಮಾಲೀಕರಾದ ಬಿ. ತಿಪ್ಪೇಶ್ ಮತ್ತು ಶ್ರೀಮತಿ ಮಂಜುಳಾ ತಿಪ್ಪೇಶ್ ದಂಪತಿಗಳನ್ನು ಸನ್ಮಾನಿಸಲಾಯಿತು.

ಹರಿಹರ ಪುರಸಭೆಯ ಮಾಜಿ ಅಧ್ಯಕ್ಷ ದಿ. ಯಜಮಾನ್ ಜಯದೇವಪ್ಪ ದಿ. ಶ್ರೀಮತಿ ತಿಪ್ಪಮ್ಮ ಇವರ ಸ್ಮರಣಾರ್ಥವಾಗಿ ಅವರ ಮಕ್ಕಳು ಭಕ್ತಿ ಸೇವೆಯನ್ನು ವಹಿಸಿಕೊಂಡಿದ್ದರು.

ಹರಿಹರ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಜೆ. ಮುರುಗೇಶ್, ಬಕ್ಕಣ್ಣ, ರುದ್ರೇಶ್, ಟಿ. ಜೆ. ಸುರೇಶ್, ಆಡಿಟರ್ ಕೊಟ್ರಣ್ಣ, ಶ್ರೀಮಠದ ಟ್ರಸ್ಟಿಗಳಾದ ಅಮರಯ್ಯ ಗುರುವಿನ ಮಠ, ಶಿವಪುತ್ರಪ್ಪ, ನಾಗರಾಜ್ ಯರಗಲ್, ತ್ರಿಶೂಲ್ ಚಿತ್ರಮಂದಿರದ ತಿಪ್ಪೇಶ್, ಪ್ರಭಣ್ಣ ಮತ್ತಿರರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಟಿ.ಹೆಚ್.ಎಂ. ಶಿವಕುಮಾರಸ್ವಾಮಿ ಸಂಗಡಿಗರಿಂದ ಪ್ರಾರ್ಥಿಸಿದರು. 'ಇಂದಿನ ಸುದ್ದಿ' ಸಂಪಾದಕ ವೀರಪ್ಪ ಎಂ. ಭಾವಿ ಸ್ವಾಗತಿಸಿದರು. ಶ್ರೀಮತಿ ಸುಜಾತ ಮತ್ತು ಶ್ರೀಮತಿ ವಿ.ಬಿ. ತನುಜ ಕಾರ್ಯಕ್ರಮ ನಿರೂಪಿಸಿದರು.

# ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ ಎಸ್. ಸೂರ್ಯಗೆ ಪ್ರಥಮ ಸ್ಥಾನ



ದಾವಣಗೆರೆ, ಜು.2- ಜಿಲ್ಲಾ ಯೋಗ ಒಕ್ಕೂಟ ಹಾಗೂ ಲಯನ್ಸ್ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ನಗರದ ಸೋಮೇಶ್ವರ ಶಾಲೆಯ ವಿದ್ಯಾರ್ಥಿ ಎಸ್. ಸೂರ್ಯ ಪ್ರಥಮ ಸ್ಥಾನ ಪಡೆದಿದ್ದಾರೆ.

ಎಸ್.ಎಸ್. ಯೋಗ ಫಿಟ್‌ನೆಸ್ ಅಂಡ್ ಯೋಗ ಇನ್‌ಸ್ಟಿಟ್ಯೂಟ್‌ನ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಅಂತರರಾಷ್ಟ್ರೀಯ ತರಬೇತುದಾರ ರಾದ ಸಂತೋಷ್ ಡಿ. ಅವರು ತರಬೇತಿ ನೀಡಿರುವ ಈ ತಂಡಕ್ಕೆ ಪ್ರಥಮ ಸ್ಥಾನ ಲಭಿಸಿದೆ. 10 ವರ್ಷ ವಿಭಾಗದಲ್ಲಿ ಸೂರ್ಯ ಎಸ್. (ಶ್ರೀ ಸೋಮೇಶ್ವರ ಶಾಲೆ) ಪ್ರಥಮ ಸ್ಥಾನ , ವಿಷ್ಣುವರ್ಧನ ಪಿ. (ಶ್ರೀ ಸೋಮೇಶ್ವರ ಶಾಲೆ) ತೃತೀಯ ಸ್ಥಾನ ಹಾಗೂ ಲಕ್ಷ್ಮೀಶ ಹೆಚ್. (ಮಾಗನೂರು ಬಸಪ್ಪ ಶಾಲೆ) ಪ್ರಥಮ ಸ್ಥಾನ ಪಡೆದಿದ್ದಾರೆ. 14 ರಿಂದ 17 ವರ್ಷ ವಿಭಾಗದಲ್ಲಿ ಮಾಗನೂರು ಪ್ರಿಯಾಂಕ (ತರಳಬಾಳು ಕಾಲೇಜು) ದ್ವಿತೀಯ ಸ್ಥಾನ ಪಡೆದಿದ್ದಾರೆ.

# ವಾರ್ತಾ ಇಲಾಖೆಯ ಬಸವರಾಜ್ ನಿವೃತ್ತಿ : ಇಲಾಖೆಯಿಂದ ಬೀಳ್ಕೊಡುಗೆ



ದಾವಣಗೆರೆ, ಜು.2 - ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗ್ರೂಪ್ 'ಡಿ' ನೌಕರ ಬಿ.ಎಸ್.ಬಸವರಾಜ ಅವರು ನಿನ್ನೆ ವಯೋನಿವೃತ್ತಿ ಹೊಂದಿದ್ದು, ಇಲಾಖೆಯ ಪರವಾಗಿ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ. ಧನಂಜಯಪ್ಪ ಮಾತನಾಡಿ, ಸದಾ ಕ್ರಿಯಾಶೀಲತೆಯಿಂದ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಬಸವರಾಜ್, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟಗಳಲ್ಲಿಯೂ ಸಹ ಭಾಗವಹಿಸುತ್ತಿದ್ದರು. ಮುಂದಿನ ದಿನಗಳಲ್ಲಿಯೂ ಅವರ ಸೇವಾ ಮನೋಭಾವ ಹೀಗೆ ಮುಂದುವರೆಯಲಿ ಎಂದು ಶುಭ ಆರೈಸಿದರು. ಇಲಾಖೆ ಸಿಬ್ಬಂದಿಗಳಾದ ಗಂಗಾಧರ್, ಚನ್ನಕೇಶವ, ಶೈಲ, ಶಿಲ್ಪಾ, ಗಣೇಶ್, ಉಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಮಣಿಪುರ ಕೋಮು ಗಲಭೆ ನಿಯಂತ್ರಿಸಲು ಒತ್ತಾಯ

ದಾವಣಗೆರೆ, ಜು. 2- ಮಣಿಪುರದಲ್ಲಿ ನಡೆಯುತ್ತಿರುವ ನಿರಂತರ ಹಾಗೂ ವ್ಯಾಪಕ ಕೋಮು ಗಲಭೆಗಳಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಕೂಡಲೇ ಕೋಮು ಸಂಘರ್ಷ ನಿಯಂತ್ರಿಸಿ, ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುವಂತೆ ಆಗ್ರಹಿಸಿ ಎಸ್‌ಯುಸಿಐ ಪ್ರತಿಭಟನೆ ನಡೆಸಿತು.

ಇದೇ ವೇಳೆ ಮಾತನಾಡಿದ ಎಸ್‌ಯುಸಿಐ ರಾಜ್ಯ ಸಮಿತಿ ಸದಸ್ಯೆ ಬಿ.ಆರ್. ಅಪರ್ಣಾ ಅವರು, ಕೇಂದ್ರದ ಬಿಜೆಪಿ ಸರ್ಕಾರವು ತನ್ನ ರಾಜಕೀಯ ಅಧಿಪತ್ಯ ಸಾಧಿಸಲು ಕುಕ್ಕಿ ಮತ್ತು ಇತರೆ ಬುಡಕಟ್ಟು ಜನಾಂಗದ ರೂಢಿಯ ಆಚರಣೆ, ಕಟ್ಟುಪಾಡುಗಳನ್ನು ಕಾಪಾಡುತ್ತೇವೆ ಹಾಗೂ ಅವರ ಬೇಡಿಕೆಗಳನ್ನು ಈಡೇರಿಸುತ್ತೇವೆ ಎಂದು 2022 ರ ವಿಧಾನಸಭಾ ಚುನಾವಣೆಯಲ್ಲಿ ಆಶ್ವಾಸನೆ ನೀಡಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

ಬಹುಸಂಖ್ಯಾತ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಪ್ರಬಲವಾದ ಮೈತೆಯಿ ಸಮುದಾಯದ ಪರ ಪರಿಶಿಷ್ಟ ಪಂಗಡ ಮೀಸಲಾತಿಯನ್ನು ನಿಗದಿಪಡಿಸಿದ ನಂತರ ಬುಡಕಟ್ಟು ಜನಾಂಗಗಳ ಅಭದ್ರತೆ ಹೆಚ್ಚಾಗಿದೆ. ಇದು ಜನಾಂಗಗಳ ಆಕ್ರೋಶಕ್ಕೆ ಕಿಚ್ಚು ಹಚ್ಚಿದಂತಾಗಿದೆ. ಕೋಮು ಸೌಹಾರ್ದತೆ ಕದಡಿದಂತಾಗಿದೆ ಎಂದು ಹೇಳಿದರು.




## ನಗರದಲ್ಲಿ ಎಸ್‌ಯುಸಿಐ ಪ್ರತಿಭಟನೆ

ವಿದೇಶ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಮ್ಮ ದೇಶದ ಒಂದು ರಾಜ್ಯ ಹೊತ್ತಿ ಉರಿಯುತ್ತಿರುವುದು ಕಣ್ಣಿಗೆ ಕಾಣುತ್ತಿಲ್ಲವೇ? ಎಂದು ಪ್ರಶ್ನಿಸಿದರು.

ಮಣಿಪುರದಲ್ಲಿ ಸಾಮಾನ್ಯ ಜನರ ಅಮೂಲ್ಯ ಜೀವಗಳನ್ನು ಉಳಿಸಲು ಹಾಗೂ ಶಾಂತಿಯ ಮರುಸ್ಥಾಪನೆಗೆ ತುರ್ತು ಕ್ರಮ ಜರುಗಿಸಲು ಒತ್ತಾಯಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕೈದಾಳೆ ಅವರು, ಮಣಿಪುರದಲ್ಲಿ ಭುಗಿಲೆದ್ದ ಮಾರಣಾಂತಿಕ ಕೋಮು ಜ್ವಾಲೆಯನ್ನು ತೀವ್ರವಾಗಿ ಖಂಡಿಸಿದರು.

ವ್ಯಾಪಕ ಕೋಮು ಗಲಭೆಗಳಿಂದ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದು, ಸಾವಿರಾರು ಜನ ನಿರ್ಗತಿಕರಾಗಿದ್ದರೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮೂಕ ಪ್ರೇಕ್ಷಕನಂತೆ ಇರುವುದು ಖಂಡನೀಯ ಎಂದರು.

ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಮಾತನಾಡಿ, ಭಾರತದ ಈಶಾನ್ಯ ರಾಜ್ಯದ ಗಡಿಭಾಗಗಳಲ್ಲಿ ಎಂದಿಗೂ ಜನಾಂಗೀಯ ಕಲಹ ಹೆಚ್ಚಾಗಿದೆ. ರಾಜ್ಯದ ಜನ ಜೀವನ ಸರ್ವನಾಶವಾಗುತ್ತಿದೆ. ಇಂತಹ ಸಮಯದಲ್ಲಿ ಶಾಂತಿ ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯ. ಆದರೆ ಪ್ರಧಾನಿ ಮೋದಿ ಆಸ್ಟ್ರೇಲಿಯಾ, ಯುಎಸ್‌ಎ ಪ್ರವಾಸ ಕೈಗೊಂಡಿದ್ದಾರೆ. ಅಷ್ಟೇ ಅಲ್ಲದೇ ಮೌನ ವಹಿಸಿರುವುದು ಖಂಡನೀಯ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಘಟನಾ ಸಮಿತಿ ಸದಸ್ಯ ತಿಪ್ಪೇಸ್ವಾಮಿ, ಮಧು ತೊಗಲೇರಿ, ಟಿ.ವಿ.ಎಸ್. ರಾಜು, ಮಂಜುನಾಥ್ ಕುಕ್ಕುವಾಡ, ಕೆ. ಭಾರತಿ, ಬನಶ್ರೀ, ಪರಶುರಾಮ, ಬಿ. ಕಾವ್ಯ, ಪೂಜಾ ನಂದಿಹಳ್ಳಿ, ಮಮತಾ ಮತ್ತಿತರರಿದ್ದರು.

## ಗುರುಪೂರ್ಣಿಮೆ ಗುರುವಿಗೆ ನಮನ

ಗುರುವಿಗೆ ನಮನ ಗುರುವಿಗೆ ನಮನ
ಗುರುಪೂರ್ಣಿಮೆ ದಿನ ಗುರುವಿಗೆ ನಮನ

ಕಗ್ಗತ್ತಲಲಿ ಚಂದ್ರನಂತೆ ಹೊಳೆಯುವ
ಬಗ್ಗದ ಅಜ್ಞಾನ ಕತ್ತಲ ಸರಿಸುವ
ಕುಗ್ಗಿಸಿ ಅಹಂಕಾರ ಶಿಕ್ಷಿಸಿ ಸಲಹುವ
ಮುಗ್ಗರಿಸದಂತೆ ಜೊತೆಯಲೇ ಇರುವ

ಯೋಗ್ಯ ಕಲ್ಲು ಶಿಲ್ಪಿ ಹುಡುಕುವಂತೆ
ಯೋಗ್ಯ ಶಿಷ್ಯರ ಗುರುವು ಹುಡುಕುವ
ಯೋಗ್ಯತೆ ಹೆಚ್ಚಿಸೋ ಉಳಿಯೇಟಿನಂತೆ
ಯೋಗ್ಯ ಗುರುವು ಗುರಿ ಮುಟ್ಟಿಸುವ

ಅನುಭವ ಅನುಭಾವ ತಿಳಿಸುವ
ಅನುಕ್ಷಣವೂ ಒಳಿತನ್ನು ಬಯಸುವ
ಅನುಪಮ ಗುರಿಯನು ಕೊಟ್ಟು ಸಲಹುವ
ತನುಮನವನು ಧಾರೆ ಎರೆವ

ಜಗದ್ಗುರು ಕೃಷ್ಣ ಅರ್ಜುನನ ಕಾಯ್ದಂತೆ
ಸೊಗಸಾಗಿ ಆತ್ಮಜ್ಞಾನ ಬಿಡಿಸಿ ಹೇಳಿದಂತೆ
ನಗುತ ಕಷ್ಟಗಳ ದೂರ ಮಾಡಿದಂತೆ
ಜಗತ್ಪಿತ ಸಿರಿಹರಿ ಗುರುವಾಗಿ ಪೊರೆವ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ಮಾದಕ ವಸ್ತುಗಳಿಗೆ ದಾಸರಾಗಿ ಬದುಕನ್ನು ಹಾಳುಮಾಡಿಕೊಳ್ಳುತ್ತಿರುವುದು ದುರಂತ

## ತರಳಬಾಳು ಕಾಲೇಜಿನಲ್ಲಿ ಮಾದಕ ದ್ರವ್ಯ ವಿರೋಧಿ ದಿನಾಚರಣೆ, ಜಾಗೃತಿ

ದಾವಣಗೆರೆ, ಜು.2- ನಗರದ ತರಳಬಾಳು ಕಾಲೇಜಿನಲ್ಲಿ 'ಮಾದಕ ದ್ರವ್ಯ ವಿರೋಧಿ ದಿನಾಚರಣೆ' ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಬಡಾವಣೆ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಧನಂಜಯ್ ಮಾತನಾಡಿ, ವಿದ್ಯಾರ್ಥಿಗಳು ಓದಬೇಕಾದ ವಯಸ್ಸಿನಲ್ಲಿ ಮಾದಕ ವಸ್ತುಗಳಿಗೆ ದಾಸರಾಗಿ ಬದುಕನ್ನು ಹಾಳುಮಾಡಿಕೊಳ್ಳುತ್ತಿರುವುದು ದುರಂತ ಎಂದರು.

ಓದುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದುಶ್ಚಟಗಳು ಪ್ರಾರಂಭದಲ್ಲಿ ಆಕರ್ಷಣೀಯವಾಗಿ ಕಂಡರೂ ನಂತರದಲ್ಲಿ ಅವುಗಳು ತಮ್ಮ ಓದನ್ನು ಅರ್ಧದಲ್ಲಿ ಬಿಡುವ ಹಾಗೂ ನಮ್ಮ ಪ್ರಾಣಕ್ಕೆ ಅಪಾಯವನ್ನು ತರುವುದರಲ್ಲಿ ಎರಡು ಮಾತಿಲ್ಲ. ಮಾದಕ ವಸ್ತು ಸೇವನೆಯಿಂದ ಆಗುವ ದುಷ್ಪರಿಣಾಮಗಳನ್ನು ಮನಮುಟ್ಟುವ ಹಾಗೆ ತಿಳಿಸಿದರು. ಆದ್ದರಿಂದಲೇ ಪ್ರತಿಯೊಬ್ಬ ವ್ಯಕ್ತಿಯೂ ಎಚ್ಚರಿಕೆ ವಹಿಸಬೇಕು ಎಂದರು.

ಸಮಾಜದಲ್ಲಿ ಬದುಕುವ ಪ್ರತಿಯೊಬ್ಬರೂ ಜಾಗೃತರಾಗಿ ತಾವು ಮತ್ತು ತಮ್ಮ ಜೊತೆಗೆ ಇರುವವರಲ್ಲಿ ಮಾದಕ ವಸ್ತು ಅದರ ದುಷ್ಪರಿಣಾಮಗಳ ಅರಿವನ್ನು ಮೂಡಿಸಿ, ಉತ್ತಮ ಸಮಾಜದ ನಿರ್ಮಾಣ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇದರೊಂದಿಗೆ ಉತ್ತಮ ರಾಜ್ಯ, ಉತ್ತಮ ದೇಶ ನಿರ್ಮಿಸಿ ನಾವೆಲ್ಲರೂ ಅತ್ಯುತ್ತಮ ಪ್ರಜೆಗಳಾಗಬೇಕು. ಆಧುನಿಕ ದಿನಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಬದುಕನ್ನು ರೂಪಿಸಿಕೊಂಡು ತಮ್ಮ ಕನಸನ್ನು ನನಸು ಮಾಡಿಕೊಳ್ಳಬೇಕು ಎಂದು ತಿಳಿಸಿದರು.



# ಸಾಹಿತ್ಯ ಕ್ಷೇತ್ರದಲ್ಲಿ ಪರಿಶ್ರಮ ಬಹಳ ಮುಖ್ಯ

ಹರಪನಹಳ್ಳಿ, ಜು. 2 - ನಾಡು, ನುಡಿ ಬಗ್ಗೆ ಅಭಿರುಚಿ ಇಲ್ಲದ ದಿನಮಾನಗಳಲ್ಲಿ ಇಂತಹ ಸಂಘಗಳು, ಘಟಕಗಳು ಹೆಚ್ಚು ಹೆಚ್ಚು ಬೆಳೆಸಿ ಹೆಚ್ಚಿನ ಕವಿಗಳನ್ನು ಸೃಷ್ಟಿಸುವ ಕೆಲಸವಾಗಬೇಕಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಬರಹಗಾರರ ಸಂಘದ ತಾಲ್ಲೂಕು ಘಟಕದ ಉದ್ಘಾಟನೆ, ಪದಗ್ರಹಣ, ಶಿಕ್ಷಣಸಿರಿ ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಕ್ಷೇತ್ರದಲ್ಲಿ ಪರಿಶ್ರಮ ಬಹಳ ಮುಖ್ಯ, ಬರಹಗಾರರು, ವಿಶೇಷವಾಗಿ ವಿವಿಧ ಆಯಾಮಗಳ ಬರಹಗಳಲ್ಲಿ ಗುರುತಿಸಿಕೊಂಡಿರುತ್ತಾರೆ, ಎಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಇರುತ್ತದೆಯೋ ಅಂತಹ ಕ್ಷೇತ್ರದಲ್ಲಿ ಸಾಹಿತ್ಯ ಕೂಡ ಜೀವಂತವಾಗಿರುತ್ತದೆ. ಕನ್ನಡ ನಾಡು ನುಡಿ ಬಗ್ಗೆ ಎಲ್ಲರೂ ಅಭಿಮಾನ ಹೊಂದಬೇಕು. ಸಾಂಸ್ಕೃತಿಕವಾಗಿ ಹರಪನಹಳ್ಳಿ ಕೂಡ ಒಂದಾಗಿದೆ ಎಂದು ಹೇಳಿದರು.

ಬರಹಗಾರರ ಸಂಘದ ರಾಜ್ಯಾಧ್ಯಕ್ಷ ಮಧುನಾಯ್ಕ ಮಾತನಾಡಿ ಸಾಹಿತ್ಯ ಮತ್ತು ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳಾಗಿವೆ 2019ರಲ್ಲಿ ಆರಂಭವಾದ ಈ ಸಂಘವು ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಈಗಾಗಲೇ ಘಟಕಗಳನ್ನು ಸ್ಥಾಪಿಸಿ, ಹೊರ ರಾಜ್ಯ ಮತ್ತು ಹೊರ ದೇಶಗಳಲ್ಲೂ ಕೂಡ ಸಕ್ರಿಯವಾಗಿದ್ದು, ಈ ಮುಂದಿನ ದಿನಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕೆಲಸ ಮುಂದುವರೆಯಲಿದೆ ಎಂದರು.



ಹರಪನಹಳ್ಳಿ : ಕರ್ನಾಟಕ ರಾಜ್ಯ ಬರಹಗಾರರ ಸಂಘದ ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿ, ಇಂದಿನ ಯುವ ಜನರು ಬರೀ ಮೊಬೈಲ್, ಟಿ.ವಿ. ಗಳಲ್ಲಿ ನಿರತರಾಗಿ ಓದುವ, ಬರೆಯುವ ಅಭ್ಯಾಸ ಕಡಿಮೆಯಾಗುತ್ತಿದ್ದು, ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸದಾ ಕ್ರಿಯಾಶೀಲತೆ ಇಂದ ಇರಬೇಕು. ಕನ್ನಡ ಸಾಹಿತ್ಯ ಪರಿಷತ್ತು ಸದಾ ನಿಮಗೆ ಬೆಂಬಲವಾಗಿರುತ್ತದೆ ಎಂದರು.

ಬರಹಗಾರರ ಕುರಿತು ನಿವೃತ್ತ ಕನ್ನಡ ಉಪನ್ಯಾಸಕ ಎಂ.ಪಿ.ಎಂ.ಶಾಂತವೀರಯ್ಯ ಉಪನ್ಯಾಸ ನೀಡಿದರು. ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ, ಕರ್ನಾಟಕ ರಾಜ್ಯ ಬರಹಗಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ಐ. ಜಯಮ್ಮ ಮತ್ತಿಹಳ್ಳಿ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಣಕಾರ ರಾಜಶೇಖರ್, ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ. ಜಗದಪ್ಪ, ಪಿ.ಡಿ.ಓ ಮಾರುತೇಶ. ಕೆ. ಅಗ್ನಿಶಾಮಕ ಠಾಣಾಧಿಕಾರಿ ರಾಮಪ್ಪ, ಜಿಲ್ಲಾ ಗೌರವ ಸಲಹೆಗಾರ ದೇವೇಂದ್ರಗೌಡ, ಕರ್ನಾಟಕ ರಾಜ್ಯ ಬರಹಗಾರರ ಸಂಘದ ಗೌರವ ಅಧ್ಯಕ್ಷ ಬಸವನಗೌಡ ಪಾಟೀಲ್, ಅಧ್ಯಕ್ಷ ಕೆ. ಬಸವರಾಜ, ಉಪಾಧ್ಯಕ್ಷರಾದ ಹೊರಕಾವಲ ಅರುಣಕುಮಾರ, ಮೂರ್ತಿ ಎಲ್, ಪ್ರಧಾನ ಕಾರ್ಯದರ್ಶಿ ಮಂಜುನಾಥ ಎಚ್.ಕೆ. ಸಹ ಕಾರ್ಯದರ್ಶಿ ಉದಯಕುಮಾರ, ಮಹಿಳಾ ಪ್ರತಿನಿಧಿ ಶಾಂತ, ಸದಸ್ಯರಾದ ಬಸವರಾಜ ಕರುವಿನ, ಕೊಟ್ರೇಶ. ಕೆ. ಶಾಂತಲಿಂಗಪ್ಪ. ಟಿ, ಗಾಟಿನ ಮಂಜುನಾಥ, ಕೆ. ಶಿವಮೂರ್ತಿ, ಸಾಹಿತಿ ಕೆ.ಎಸ್. ವೀರಭದ್ರಪ್ಪ, ಉಮೇಶ ಅಜ್ಜಣನವರ್, ಉದಯಕುಮಾರ, ವಿಠೋಬ ಶೆಟ್ಟಿ ಸೇರಿದಂತೆ ಇತರರು ಇದ್ದರು.

# ಇಂದು ಗಾಯತ್ರಿ ಪೂಜೆ, ಉಪಾಸನೆ

ದಾವಣಗೆರೆ : ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಗುರು ಪೌರ್ಣಿಮೆ ಅಂಗವಾಗಿ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷ ಡಾ॥ ಸುಶೀಲಮ್ಮ ತಿಳಿಸಿದ್ದಾರೆ. ಡಾ. ರಮೇಶ್ ಪಾಟೀಲ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

# ನಗರದಲ್ಲಿ ಇಂದು ಶಿಶುನಾಳ ಶರೀಫರ ಜಯಂತಿ : ಅನ್ನ ಸಂತರ್ಪಣೆ

ಶ್ರೀ ಶಿಶುನಾಳ ಶರೀಫರ 204ನೇ ಜಯಂತಿ ಪ್ರಯುಕ್ತ ಜಯನಗರ 'ಎ' ಬ್ಲಾಕ್‌ನ ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಶಿಶುನಾಳ ಶರೀಫರ ಶಿವಾಲಯದಲ್ಲಿ, ಇಂದು ಬೆಳಿಗ್ಗೆ 10.30 ರಿಂದ ಪ್ರಸಾದ ವ್ಯವಸ್ಥೆ ಏರ್ಪಡಿಸಿದೆ. ಸದ್ಭಕ್ತರು ಪ್ರಸಾದ ಸ್ವೀಕರಿಸಬೇಕಾಗಿ ಸದ್ಭಕ್ತ ಮಂಡಳಿಯ ಪರವಾಗಿ ಬಕ್ಕೇಶ್ ಯು.ಆರ್. ತಿಳಿಸಿದ್ದಾರೆ. ವಿವರಗಳಿಗೆ 94493 20378 ಗೆ ಸಂಪರ್ಕಿಸುವುದು.

# ಬಸ್ಸಿನ ವ್ಯವಸ್ಥೆ ಕಲ್ಪಿಸಿಕೊಡಲು ಎಬಿವಿಪಿ ಆಗ್ರಹ

ದಾವಣಗೆರೆ, ಜು.2- ರಾಜ್ಯದಲ್ಲಿ ನೂತನ ಸರ್ಕಾರವು 'ಶಕ್ತಿ ಯೋಜನೆ' ಅಡಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಿಸಿರುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ಕಾರಣದಿಂದಾಗಿ ಶಾಲಾ-ಕಾಲೇಜುಗಳಿಗೆ ಬರುವಂತಹ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಒತ್ತಾಯಿಸಿದೆ.


ವಿದ್ಯಾರ್ಥಿಗಳು ಸರಿಯಾಗಿ ತರಗತಿಗಳಿಗೆ ಹಾಜ ರಾಗಲು ಸಾಧ್ಯವಾಗುತ್ತಿಲ್ಲ. ಪರೀಕ್ಷೆಗಳಿಗೆ ಹಾಜರಾ ಗಲು ಕಷ್ಟದ ಪರಿಸ್ಥಿತಿಯನ್ನುಂಟು ಮಾಡಿದೆ. ಸಾಮಾನ್ಯ ವಾಗಿ ಹಳ್ಳಿಗಳಲ್ಲಿ ಸಮರ್ಪಕವಾಗಿ ಎಷ್ಟು ಸಂಖ್ಯೆಯಲ್ಲಿ ಬಸ್ಸಿನ ಸಂಖ್ಯೆ ಬೇಕೋ ಅಷ್ಟು ಸಂಖ್ಯೆಯಲ್ಲಿ ಬಸ್ಸುಗಳು ಸಂಚರಿಸುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ನಡೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಸ್ಸಿನ ಸಮಸ್ಯೆಯಿಂದಾಗಿ ಇತ್ತೀಚೆಗೆ ಹಾವೇರಿಯಲ್ಲಿ ವಿದ್ಯಾರ್ಥಿನಿಗೆ ಬಸ್ಸನ್ನು, ಹತ್ತಲು ಹೋದಾಗ ಅಪಘಾತವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ವಿದ್ಯಾರ್ಥಿಗಳು ಶಾಲಾ-ಕಾಲೇಜಿಗೆ ತೆರಳುವ ಸಮಯದಲ್ಲಿ ಹಾಗೂ ಹಿಂತಿರುಗುವ ಸಮಯದಲ್ಲಿ ಬಸ್ಸಿನ ಸಂಖ್ಯೆಯನ್ನು ಹೆಚ್ಚಿಸಿ ಕೊಡಬೇಕು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಬಸ್ಸಿನ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು, ಈಗಾಗಲೇ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಬಸ್ಸಿನ ಪ್ರಯಾಣ ಒದಗಿಸಿಕೊಟ್ಟಿರುವ ಹಾಗೆ ಮುಂದಿನ ಯೋಜನೆಗಳಲ್ಲಿ ವಿದ್ಯಾರ್ಥಿಗಳಿಗೂ ಉಚಿತವಾಗಿ ಬಸ್ಸಿನ ಪ್ರಯಾಣವನ್ನು ಒದಗಿಸಿಕೊಡಬೇಕೆಂದು ಪರಿಷತ್ ಆಗ್ರಹಿಸಿದೆ.

ಈ ಸಂದರ್ಭದಲ್ಲಿ ದಾವಣಗೆರೆ ವಿಭಾಗ ಸಂಘಟನಾ ಕಾರ್ಯದರ್ಶಿ ಮಂಜುನಾಥ್ ಕೊಳ್ಳೇರ, ಪ್ರಮುಖರಾದ ಕೊಟ್ರೇಶ್ ನಾಗೇನಹಳ್ಳಿ ನವೀನ್ ಡಿ.ಕೆ. ವರುಣ್ , ಶಶಾಂಕ್, ರತನ್, ಮನೋಜ್ ಇನ್ನಿತರರು ಉಪಸ್ಥಿತರಿದ್ದರು.

## ಗುರು ಪೂರ್ಣಿಮೆ



ವಿಶ್ವಕ್ಕೆಲ್ಲ ಭಾರತವು
ಗುರು ಪರಂಪರೆಯ
ಗುರು ಬ್ರಹ್ಮಗುರು ವಿಷ್ಣು
ಗುರುದೇವೋ ಮಹೇಶ್ವರ
ಗುರು ಸಾಕ್ಷಾತ್ ಪರಬ್ರಹ್ಮತಸ್ಮೈ
ಶ್ರೀ ಗುರುವೇ ನಮಃ !!

ಗುರು ಇಲ್ಲದ ಮನ
ಮನ್ವಂತರವೇ ಇಲ್ಲದ ಗುರು
ಗುರಿಯೇ ಇಲ್ಲದ ಜನರ ಜೀವನ
ಗುರಿ ಗುರಿಯೇ ಪಾರಮಾರ್ಥಿಕ
ಮುಂದಿನ ಗುರಿ ಹಿಂದಿನದೆ ಗುರು....!!

ಗುರು ಎನ್ನುವುದು
ಒಂದು ಜಗದ ಜಗಜ್ಯೋತಿ
ಜನರ ಅಂಧಕಾರದ ಮನಕ್ಕೆ
ಗುರುವಿನ ಬೆಳಕಿನ ಸ್ಪರ್ಶತೆ
ಸೂರ್ಯನ ಕೋಟಿ ಕಿರಣಗಳ ಜಗಜ್ಯೋತಿ ...!!

ಮಹಾಭಾರತವೇ
ಕೃಷ್ಣಾರ್ಜುನರ ಇಡೀ ವಿಶ್ವಕ್ಕೆ
ಅತಿರಥ ಮಹಾರಥರು
ಅವರ ಗುರು-ಶಿಷ್ಯರ ಗಾಢವಾದ
ಅನುಬಂಧವೇ ಏನೆಲ್ಲಾ ವಿಶ್ವರೂಪತೆಯು...!!

ಭರತ ಭೂಮಿಯ
ಭಾರತವೇ ವಿಶ್ವಕ್ಕೆಲ್ಲ
ಮಾರ್ಗದರ್ಶನದ ದಾರ್ಶನಿಕ
ಭರತ ಹುಣ್ಣಿಮೆಯ ಕ್ಷೀರತೆಯೂ
ಬೆಳದಿಂಗಳ ಬೆಳಕಿನ ಬೆಳಕೇ ಗುರುವಾಗಿದೆ...!!

ರಾಜ ಸಿದ್ಧಾರ್ಥ ಮತ್ತು ಸರ್ವ
ಸುಖದ ಸಂಪತ್ತಿನ ಸಕಲ ವೈಭವ ತೊರೆದು
ಅಧ್ಯಾತ್ಮದ ಬುದ್ಧ ಗಯಾ ಅರಳಿ ವೃಕ್ಷದಡಿ
ತನ್ನ ತಾನರಿತು ವಿಶ್ವವನ್ನೇ ಜ್ಞಾನೋದಯದ
ಕೇಂದ್ರಿಕರಿಸಿ, ಭಾರತವೇ ವಿಶ್ವಕ್ಕೆ ಜಗದ್ಗುರುವಾಗಿದೆ...!!

**- ಸಂಗಮ್ ಟಿ.ಜಿ.**
ಗಣಿತ ಶಿಕ್ಷಕರು, ಕೊಟ್ಟೂರು.

## ಜಿ.ಬೇವಿನಹಳ್ಳಿ : ಇಂದು ಗುರುವಂದನಾ ಕಾರ್ಯಕ್ರಮ



ಮಲೇಬೆನ್ನೂರು ಸಮೀಪದ ಜಿ. ಬೇವಿನಹಳ್ಳಿ ಗ್ರಾಮದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ಶ್ರೀಕ್ಷೇತ್ರ ಪುಷ್ಪಗಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸ್ವ-ಸಹಾಯ ಸಂಘಗಳ ಸದಸ್ಯರು ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿಯವರಿಗೆ ಗುರು ಪೌರ್ಣಿಮೆ ಅಂಗವಾಗಿ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ. ಮಹೇಶ್ವರಪ್ಪ ತಿಳಿಸಿದ್ದಾರೆ.

## ಶಿರಡಿ ಮಂದಿರದಲ್ಲಿಂದು ಗುರು ಪೂರ್ಣಿಮೆ



ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಗುರು ಪೂರ್ಣಿಮೆ ಆಚರಿಸಲಾಗುವುದು.

ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, 9 ಗಂಟೆಗೆ ದೀಪಾರಾಧನೆ, ಕಲಶ ಸ್ಥಾಪನೆ, ನಂತರ ಗೋಪುರ ಧ್ವಜಾರೋಹಣ ಕಾರ್ಯಕ್ರಮಗಳು ಏರ್ಪಾಡಾಗಿವೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ. ಪೂಜ್ಯ ಶ್ರೀ ಜಡೇಸಿದ್ಧ ಶಿವಯೋಗೀಶ್ವರ ಶಾಂತಾಶ್ರಮದ ಶ್ರೀ ಶಿವಾನಂದ ಸ್ವಾಮಿಗಳು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಹಾಗೂ ಇತರೆ ಗಣ್ಯರು ಉಪಸ್ಥಿತರಿರುವರು.

ಬೆಳಿಗ್ಗೆ 7 ರಿಂದ 2.30 ರವರೆಗೆ ಶ್ರೀ ಬಾಬಾರವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ಹಾಗೂ 12 ಗಂಟೆಗೆ ಮಹಾಮಂಗಳಾರತಿ ನಡೆಸಲಾಗುವುದು. ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12ರವರೆಗೆ ಸಾಯಿ ಸತ್ಯನಾರಾಯಣ ಪೂಜೆ, ರಾತ್ರಿ 8.30 ಕ್ಕೆ ಪಾಲಕಿ ಉತ್ಸವ, ಧುನಿ ಪೂಜೆ, ಶೇಜಾರತಿ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯುವುದು.

## ಅಕ್ಕಮಹಾದೇವಿ ಗರ್ಲ್ಸ್ ಹೈಸ್ಕೂಲ್‌ನಲ್ಲಿ ಉಚಿತ ಸಮವಸ್ತ್ರ ವಿತರಣೆ



ದಾವಣಗೆರೆ, ಜು. 2- ಅಕ್ಕಮಹಾದೇವಿ ಗರ್ಲ್ಸ್ ಹೈ ಸ್ಕೂಲ್‌ನಲ್ಲಿ ಈಚೆಗೆ ನಗರದ ಬಾಳಯ್ಯ ಹಿರೇಮಠ್ ಮತ್ತು ಪರಿವಾರದವರಿಂದ ಬಡ ವಿದ್ಯಾರ್ಥಿನಿಯರುಗಳಿಗೆ ಸ್ಫೂರ್ತಿಯಾಗುವಂತೆ ಉಚಿತ ಸಮವಸ್ತ್ರ ನೀಡಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.


## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 2- ಜಿಲ್ಲೆಯ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ದ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ದ, ಸಿಖ್ ಹಾಗೂ ಪಾರ್ಸಿ ಜನಾಂಗದವರಿಗೆ ಅರಿವು ವಿದೇಶಿ ಸಾಲ ಯೋಜನೆಯಡಿ ವಿದ್ಯಾಭ್ಯಾಸಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಮತ್ತು ಮಾನ್ಯತೆ ಪಡೆದಿರುವ ಯಾವುದೇ ವಿದೇಶ ವಿಶ್ವವಿದ್ಯಾಲಯದಿಂದ, ಭಾರತ ದೇಶದ ಪ್ರತಿಷ್ಠಿತ IIT'S, IIM'S, ISC ಸಂಸ್ಥೆಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮಾಡಬಯಸುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದೇಶಿ ವಿದ್ಯಾಭ್ಯಾಸ ಸಾಲ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಹರಾಗಿದ್ದು, ನಿಗಮದ ವೆಬ್‌ಸೈಟ್ HYPERLINK "http://www.kmdconline.karnataka.gov.in/" \t "_blank" www.kmdconline.karnataka.gov.in ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ, ಜಯದೇವ ಸರ್ಕಲ್ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 08192-232349, 8577944214 ಸಂಪರ್ಕಿಸಲು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ನಿಜ ಸುಖಿ ಶರಣ ಹಡಪದ ಅಪ್ಪಣ್ಣ

ಹನ್ನೆರಡನೇಯ ಶತಮಾನದ ವಚನ ಚಳುವಳಿ ಮತ್ತು ಸಾಮಾಜಿಕ ಕ್ರಾಂತಿ ಒಂದು ನವ ಮನ್ವಂತರಕ್ಕೆ ನಾಂದಿಯಾಗಿ, ಇಂದಿಗೂ ಮಾನವನ ಸರ್ವತೋಮುಖ ವಿಕಾಸಕ್ಕೆ ಒಂದು ಸಂಜೀವಿನಿಯಾಗಿದೆ. ಬಸವಾದಿ ಶರಣರು ಅಂದು ನೆಟ್ಟ ಮಾನವ ಕುಲದ ಚಿರಂತನ ಮೌಲ್ಯಗಳಾದ ಸಮತೆ, ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಭ್ರಾತೃತ್ವದ ಬೀಜಗಳು ಅವರ ನಡೆ - ನುಡಿ ಸಿದ್ಧಾಂತದ ಕಾರಣ ಕಾಯಕ - ದಾಸೋಹ, ವಿಚಾರ - ಆಚಾರದ ಅನುಷ್ಠಾನದ ಕಾರಣ ಆಗಲೇ ಸಮೃದ್ಧಿಯ ಫಸಲು ನೀಡಿದ ಅಮೃತ ಕಾಲ.



ಒಬ್ಬ ಮನುಷ್ಯನಿಗೆ ಬೆಲೆ ಬರುವುದು ಆತನ ಹುಟ್ಟಿನಿಂದಲ್ಲ, ಜಾತಿಯಿಂದಲ್ಲ, ಬದಲಾಗಿ ಆತನ ಸತ್ಯ, ಶುದ್ಧ ಕಾಯಕದಿಂದ. ಕಾಯಕವೇ ಕೈಲಾಸ ಎಂದು ಜಗತ್ತಿಗೆ ಸಾರಿದವರು ಶರಣರು. ಮೇಲು - ಕೀಳು, ಉಳ್ಳವ - ಇಲ್ಲದವ, ಸ್ಪೃಶ್ಯ - ಅಸ್ಪೃಶ್ಯ, ಹೆಣ್ಣು - ಗಂಡು, ಪ್ರಾಂತ - ಪ್ರದೇಶ, ಹಿರಿಯ - ಕಿರಿಯ ಯಾವ ತರತಮದ ಭಾವನೆಗಳಿಗೂ ಸೊಪ್ಪು ಹಾಕದೇ ಸಕಲರಿಗೆ ಲೇಸ ಬಯಸುವವನೇ ಶರಣ ಎಂದು ಸಾರಿದವರು. ನುಡಿದಂತೆ ನಡೆದು ನಿಜ ದಾರಿ ತೋರಿದವರು. ಹಾಗಾಗಿಯೇ ವಿಶ್ವದ ಪ್ರಪ್ರಥಮ ಪ್ರಜಾಪ್ರಭುತ್ವದ ಸಂಸತ್ತು ಎಂದು ಹೆಸರಾದ ಅನುಭವ ಮಂಟಪದಲ್ಲಿ ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಮೋಳಿಗೆಯ ಮಾರಯ್ಯ, ಮೇದಾರ ಕೇತಯ್ಯ, ಸಮಗಾರ ಹರಳಯ್ಯ, ಸೊನ್ನಲಗದ ಸಿದ್ದರಾಮ ಹೀಗೆ ವಿವಿಧ ಸ್ತರದ ಶರಣರಿಗೆ ಅಲ್ಲಿ ಅವಕಾಶ ದೊರೆಯಿತು. ಸಮಾನತೆಯ ತತ್ವ ಪಸರಿಸಿತು.

ಹಡಪದ ಅಪ್ಪಣ್ಣನವರು 12ನೇ ಶತಮಾ ನದ ವಚನ ಚಳುವಳಿ, ಸಾಮಾಜಿಕ ಕ್ರಾಂತಿಯಲ್ಲಿ ಬಹು ಮುಖ್ಯ ಪಾತ್ರ ವಹಿಸಿದವರು. ಬಸವಣ್ಣನವರ ಬಾಲ್ಯದ ಒಡನಾಡಿಯಾಗಿ, ನಂತರ ಅನುಭವ ಮಂಟಪದ ಪ್ರಧಾನ ಕಾರ್ಯದರ್ಶಿಯಾಗಿ ಅಪ್ಪಣ್ಣ ಎತ್ತರೆತ್ತರಕ್ಕೆ ಬೆಳೆದ ಪರಿ ಅದ್ಭುತ. ಕಷ್ಟ ಸುಖಗಳೆರಡರಲ್ಲೂ ಅಪ್ಪಣ್ಣ ಬಸವಣ್ಣನವರಿಗೆ ಸಮಭಾಗಿ. ಹಡಪದ ಅಪ್ಪಣ್ಣನವರ ಜೀವನ ನಿಷ್ಠೆ, ಸೇವಾ ನಿಷ್ಠೆ, ಕಾಯಕ ನಿಷ್ಠೆಗಳು ಆದರ್ಶಪ್ರಾಯ, ಆನಂದಮಯ. ಹಾಗಾಗಿಯೇ ಸ್ವತಃ ಬಸವಣ್ಣನವರು ಅಪ್ಪಣ್ಣನನ್ನು ನಿಜಸುಖಿ ಶರಣ ಎಂದು ಕರೆದಿರುವುದು ಒಂದು ಹೆಗ್ಗಳಿಕೆ.

ಅಪ್ಪಣ್ಣನವರು ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಮಸಬಿನಾಳ ಗ್ರಾಮದಲ್ಲಿ ಜನಿಸಿದರು. ತಂದೆ ಚನ್ನಬಸಪ್ಪ. ತಾಯಿ ದೇವಕಮ್ಮ. ಕ್ರಿ. ಶ. 1160 ಇವರ ಕಾಲಮಾನ. ಹಡಪದ ಮನೆತನ. ಹಡಪ ಎನ್ನುವ ಪದಕ್ಕೆ ವಿಭಿನ್ನ ಅರ್ಥಗಳು. ಎಲೆ, ಅಡಿಕೆ, ತಾಂಬೂಲ ಇಟ್ಟುಕೊಳ್ಳುವ ಚೀಲ, ತಾಂಬೂಲ ಎನ್ನುವ ಅರ್ಥ ಒಂದಾದರೆ, ಗಡ್ಡ, ಮೀಸೆ, ತಲೆ ಕೂದಲನ್ನು ಕತ್ತರಿಸುವ ಕೆಲಸಕ್ಕಾಗಿ ಬಳಸುವ ಸಲಕರಣೆಗಳನ್ನು ಇಡುವ ಚೀಲ ಎನ್ನುವ ಅರ್ಥ ಇನ್ನೊಂದು ಕಡೆ. ಹಾಗಾಗಿ ಅವರ ವೃತ್ತಿಯ ಬಗ್ಗೆ ಈಗಲೂ ಕೆಲವರಲ್ಲಿ ಗೊಂದಲವಿದೆ. ಅದೇನೇ ಇರಲಿ, ಬೆಳಿಗ್ಗೆ ಎದ್ದ ತಕ್ಷಣ ಹಡಪದ ಅವರ ಮುಖ ನೋಡಬಾರದೆಂಬ ತಪ್ಪು ಕಲ್ಪನೆ ಆಗಿನ ಜನರಲ್ಲಿತ್ತು. ಈ ಮೂಢನಂಬಿಕೆಯನ್ನು ಹೋಗಲಾಡಿಸಲು ಅಣ್ಣ ಬಸವಣ್ಣನವರು ಅನುಭವ ಮಂಟಪದಲ್ಲಿ ಹೊಸ ಕಟ್ಟಳೆ ಮಾಡಿದರು. ಅದೇನು ಗೊತ್ತೇ? ಯಾರೇ ತಮ್ಮನ್ನು ನೋಡಲಿ ಬರಲಿ, ಅವರು ಮೊದಲು ಅಪ್ಪಣ್ಣನನ್ನು ಭೇಟಿಯಾಗಿ ಬರಬೇಕೆಂಬ ನಿಯಮ ಅದು. ಶರಣರ ಸರಿ ನಡೆಗೆ ಇಂತಹ ನೂರೊಂದು ಉದಾಹರಣೆಗಳು ಆದರ್ಶಗಳು ನಮಗೆ ಕಂಡಾವು.

ಅಪ್ಪಣ್ಣನವರ ವ್ಯಕ್ತಿತ್ವ ಶರಣ ಸಮೂಹದಲ್ಲಿಯೇ ಎತ್ತರೆತ್ತರ. ಅಲ್ಲಮಪ್ರಭುಗಳು ಕಲ್ಯಾಣದ ಬಸವಣ್ಣನವರ ಮಹಾಮನೆಯ ಎದುರು ನಿಂತಾಗ ಅಪ್ಪಣ್ಣನವರು ನಿರ್ವಹಿಸಿದ ಚಾಣಾಕ್ಷತೆ ಅಪರೂಪದ್ದು. ಅದೇ ರೀತಿ ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣನವರು ಕಲ್ಯಾಣವನ್ನು ತೊರೆದಾಗ, ಅವರ ಸಹವರ್ತಿಯಾಗಿ, ನೆರಳಂತೆ ಹಿಂಬಾಲಿಸಿದವರು ಅಪ್ಪಣ್ಣನವರು. ಬಸವಣ್ಣನವರು ಸಂಗಮನಾಥನಲ್ಲಿ ಐಕ್ಯತೆಗೊಳ್ಳುವುದರ ಪಡೆಯುವುದರ ಜೊತೆಗೆ ನೀಲಾಂಬಿಕೆಯೂ ಇಲ್ಲಿ ಐಕ್ಯವಾಗಲಿ ಎಂದು ನೀಲಾಂಬಿಕೆ ಕರೆತರಲು ಅಪ್ಪಣ್ಣನನ್ನು ಕಲ್ಯಾಣಕ್ಕೆ ಕಳುಹಿಸಿದ್ದು, ಅಪ್ಪಣ್ಣ ಅಲ್ಲಿನ ಪ್ರಕರಣವನ್ನು ತಂದು ಬಸವಣ್ಣನವರಿಗೆ ತಿಳಿಸಿದ ರೀತಿ, ಅಪ್ಪಣ್ಣನ ನಿಶಿತಮತಿಗೆ, ಸೂಕ್ಷ್ಮತೆಗೆ, ಲಿಂಗಾನುಸಂಧಾನದ ಶಕ್ತಿಗೆ ಹಿಡಿದ ಕೈಗನ್ನಡಿ.

ವಚನಗಳ ರಚನೆಯಲ್ಲಿ ಅಪ್ಪಣ್ಣನವರ ಕೊಡುಗೆ ಅಪಾರವಾದುದು, ಇವರ ವಚನಗಳು ಮಂತ್ರ ಗೋಪ್ಯ ಮತ್ತು ಬೆಡಗಿನ ವಚನಗಳಾಗಿ ಪ್ರಸಿದ್ಧಿ ಪಡೆದಿವೆ. ಬಸವ ಪ್ರಿಯ ಕೂಡಲ ಚನ್ನ ಬಸವಣ್ಣ ಅಂಕಿತದಲ್ಲಿ ಅಪ್ಪಣ್ಣನವರು ಬರೆದಿರುವ 251ಕ್ಕೂ ಹೆಚ್ಚು ವಚನಗಳು ಇದುವರೆಗೆ ಬೆಳಕಿಗೆ ಬಂದಿದೆ.

ಅಪ್ಪಣ್ಣ ತಂಗಡಗಿಯ ಲಿಂಗಮ್ಮನವರನ್ನು ಧರ್ಮಪತ್ನಿಯಾಗಿ ಸ್ವೀಕರಿಸಿದ ಶರಣ. ನಿಜ ಮುಕ್ತೆಯಾದ ಲಿಂಗಮ್ಮನವರು ವಿಚಾರಮತಿಯಾಗಿ, ಪತಿಯನ್ನು ಅನುಸರಿಸಿ, ಬರೆದ 114 ವಚನಗಳು ಮುತ್ತಿನಂತಹವು. ಲಿಂಗಮ್ಮನವರ ವಚನಗಳ ಅಂಕಿತನಾಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.

ಅಪ್ಪಣ್ಣನವರ ವಚನಗಳು ನೋಡಲು ಸರಳ 'ಸುಂದರ'. ಆದರೆ, ವಿಚಾರ ಪರತೆಯ ಗಣಿಯೇ ಅಪ್ಪಣ್ಣನವರ ವಚನಗಳಲ್ಲಿದೆ. ಅಪ್ಪಣ್ಣನವರ ಒಂದು ವಚನ ಇಂತಿದೆ.

ಶೀಲವಂತರು, ಶೀಲವಂತರು ಎಂಬರು.
ಶೀಲವಂತಿಕೆಯನಾರು ಬಲ್ಲರು ಹೇಳಾ ?
ನೆಲಕ್ಕೆ ಶೀಲವೆಂಬೆನೆ
ಹೊಲೆ ಹದಿನೆಂಟು ಜಾತಿ ನಡೆ-ನುಡಿವುದಕ್ಕೆ ಒಂದೇ ಆಗಿತ್ತು, ಜಲಕೆ ಶೀಲವೆಂಬನೆ,
ಮೀನ ಮೊಸಳೆಗಳು ಖಗಮೃಗಗಳು ನಿಂದೆಂಜಲು,
ಬೆಳೆಗೆ ಶೀಲವೆಂಬೆನೆ
ಎತ್ತು, ಕತ್ತೆ ತಿಂದು ಮಿಕ್ಕ ಎಂಜಲು
ಹೊನ್ನಿಗೆ ಶೀಲವೆಂಬೇನೆ
ಊರ ಹೊರೆಯಾಗಿಪ್ಪುದು
ಹೆಣ್ಣಿಗೆ ಶೀಲವೆಂಬೆನೆ
ಕಣ್ಣುಗೆಡಿಸಿ ಕಾಡುತ್ತಿಪ್ಪುದು
ಇನ್ನಾವುದು ಶೀಲ ಹೇಳಿರಣ್ಣಾ
ಇದಕ್ಕೆ ಒಳಗಾದವರೆಲ್ಲ ದುಃಶೀಲರು
ಇದ ಹಿಡಿದು ಹಿಡಿಯದೆ,
ಬಿಟ್ಟುಬಿಡದೆ ತನ್ನ ಮನಕ್ಕೆ
ಶೀಲವಾಗಿಪ್ಪದೇ ಅಚ್ಚಶೀಲ ಕಣಾ
ಬಸವ ಪ್ರಿಯ ಕೂಡಲ ಚನ್ನ ಬಸವಣ್ಣ

ಇಂತಹುದೇ ವೈಚಾರಿಕತೆಯ ಮುತ್ತು ರತ್ನಗಳು ಅಪ್ಪಣ್ಣನವರ ವಚನಗಳು. ಅವೆಲ್ಲವನ್ನು ಓದುವ ಭಾಗ್ಯ ನಮ್ಮದಾಗಲಿ.

ಅಪ್ಪಣ್ಣ ನಾಡಿನ ತುಂಬೆಲ್ಲಾ ಹೆಸರಾಗಿದ್ದಾರೆ ಎಂಬುದಕ್ಕೆ ಬನವಾಸಿಯ ಮಧುಕೇಶ್ವರ ಶಿವೋತ್ಸವ ಮಂಟಪದ ಗಗ್ಗರಿ ಕಲ್ಲಿನ ಮೇಲೆ ಇರುವ ಶರಣರ ಸಾಲಿನಲ್ಲಿ ಅಪ್ಪಣ್ಣನವರ ಚಿತ್ರವೂ ಇದೆ ಎಂಬುದು ಒಂದು ಸಾಕ್ಷಿಯಾಗಿ ನಿಲ್ಲುತ್ತದೆ. ಈಗ ಪ್ರತಿ ವರ್ಷ ಕರ್ನಾಟಕ ಸರ್ಕಾರವು ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ ಪ್ರಾರಂಭಿಸಿದ್ದು, ಆ ಮೂಲಕವಾದರೂ ಇವರ ವಚನ ಸಾಹಿತ್ಯ ಎಲ್ಲರ ಮನೆ, ಮನ ಬೆಳಗುವಂತಾಗಲಿ.



**- ಎನ್.ಟಿ.ಎರ್ರಿಸ್ವಾಮಿ**
ನಿವೃತ್ತ ಕೆನರಾ ಬ್ಯಾಂಕ್
ಲೀಡ್ ಬ್ಯಾಂಕ್ ಡಿ ಎಂ.
ಜಗಳೂರು
9901909672

# ಸಂಸದ ಸಿದ್ದೇಶ್ವರ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಸ್‌ವಿಆರ್ ಕರೆ



ಜಗಳೂರು

ಜಗಳೂರು, ಜು.2- ಸಂಸದ ಜಿ.ಎಂ.ಸಿದ್ದೇಶ್ವರ ಅವರ 71 ನೇ ಹುಟ್ಟು ಹಬ್ಬಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಕರೆ ನೀಡಿದರು.

ಪಟ್ಟಣದ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಅವರ ನಿವಾಸದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ನಾಡಿದ್ದು ದಿನಾಂಕ 5 ರಂದು ದಾವಣಗೆರೆಯ ಪಿ.ಬಿ.ರಸ್ತೆಯ ವಾಣಿ ಹೊಂಡಾ ಶೋ ರೂಂ ಆವರಣದಲ್ಲಿ ಅದ್ದೂರಿಯಾಗಿ ಕಾರ್ಯಕ್ರಮ ಜರುಗಲಿದ್ದು, ಕ್ಷೇತ್ರದಿಂದ 7 ಸಾವಿರಕ್ಕೂ ಅಧಿಕ ಕಾರ್ಯಕರ್ತರು, ಅಭಿಮಾನಿಗಳು ಸೇರಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ಸಚಿವ ಪ್ರಹ್ಲಾದ್ ಜೋಷಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವರಾದ ಶ್ರೀರಾಮುಲು, ಮುರುಗೇಶ್ ನಿರಾಣಿ, ಎಸ್.ಎ.ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಜಿ.ಕರುಣಾಕರ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ಕೆ.ಎಸ್. ನವೀನ್, ಶಾಸಕರಾದ ಬಿ.ಪಿ.ಹರೀಶ್, ಎಂ. ಚಂದ್ರಪ್ಪ, ಮಾಜಿ ಶಾಸಕರಾದ ಎಸ್. ವಿ. ರಾಮಚಂದ್ರ, ವಿರುಪಾಕ್ಷಪ್ಪ, ಪ್ರೊ.ಲಿಂಗಣ್ಣ, ಬಸವರಾಜ್ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಡಾ. ಶಿವಯೋಗಿ ಸ್ವಾಮಿ, ತುಮ್ಕೋಸ್ ಮಾಜಿ ಅಧ್ಯಕ್ಷ ಎಚ್.ಎಸ್. ಶಿವಕುಮಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

**ಶಾಸಕರ ಅಭಿವೃದ್ಧಿ ಕೆಲಸಗಳಿಗೆ ಸಹಕಾರವಿದೆ:** ನನ್ನ ಆಡಳಿತಾವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳೇ ಸೋಲಿಗೆ ಮುಳುವಾಯಿತು ಎಂದು ಬೇಸರ ವ್ಯಕ್ತಪಡಿಸಿದ ಅವರು, ಆದರೂ ವೈಯಕ್ತಿಕ ರಾಜಕೀಯ ಹಿತಾಸಕ್ತಿ ನನಗಿಲ್ಲ. ಅಭಿವೃದ್ಧಿಯೇ ನನ್ನ ಗುರಿ. ನನ್ನ ಆಡಳಿತಾವಧಿಯಲ್ಲಿ ಮೂರು ನೀರಾವರಿ ಯೋಜನೆಗಳು ಸಾಕಾರಗೊಂಡಿದ್ದು, ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಶೀಘ್ರ ಕಾಮಗಾರಿಗಳನ್ನು ಪೂರ್ಣಗೊಳಿಸಿ, ತಾಲ್ಲೂಕಿನ ರೈತರಿಗೆ ನೀರಾವರಿ ಸೌಲಭ್ಯ ದೊರೆಯಲಿ. ಮುಗಿಲಿನತ್ತ ಮುಖ ಮಾಡುವುದಕ್ಕೆ ಮುಕ್ತಿ ಸಿಗಲಿ. ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಹಾಲಿ ಶಾಸಕ ಬಿ. ದೇವೇಂದ್ರಪ್ಪ ಅವರಿಗೆ ನನ್ನ ಸಂಪೂರ್ಣ ಸಹಕಾರವಿದೆ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ಜಿಲ್ಲಾ ಉಪಾಧ್ಯಕ್ಷ ಡಿ.ವಿ.ನಾಗಪ್ಪ, ಪ.ಪಂ ಸದಸ್ಯರಾದ ಪಾಪಲಿಂಗಪ್ಪ, ದೇವರಾಜ್, ಮಾಜಿ ನಾಮನಿರ್ದೇಶನ ಸದಸ್ಯರಾದ ರುದ್ರಮುನಿ, ಬಿ.ಪಿ.ಸುಬಾನ್, ಮುಖಂಡರಾದ ಶಿವಕುಮಾರ ಸ್ವಾಮಿ, ಬಸವರಾಜ್ ಮತ್ತಿತರರು ಇದ್ದರು.


**ಸೈಟ್ ಸೇಲ್ (26 ಲಕ್ಷಕ್ಕೆ)**
M.B CITY ಯಲ್ಲಿ 30X43.7 ಉತ್ತರ (ರಿಜಿಸ್ಟರ್ ಖರ್ಚು ಸೇರಿ)
ಕಿರಣ್ ಭೂಸನೂರ್ (ಏಜೆಂಟ್)
97315-63409
20X30 ಪೂರ್ವ J.H. ಪಟೇಲ್ (25 ಲಕ್ಷ) ಕರ್ನಾಟಕ ಗೃಹ ಮಂಡಳಿ 20X30 ಪೂರ್ವ (15 ಲಕ್ಷ) ಉತ್ತರ (12 ಲಕ್ಷ)

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಪೂರ್ವ-ಉತ್ತರ ಕಾರ್ನರ್ 30x43 ಪೂರ್ವ, 40x60 ಪಶ್ಚಿಮ, ಜೆ.ಹೆಚ್ ಪಟೇಲ್ ಬಡಾವಣೆಯ ಪೋದಾರ್ ಸ್ಕೂಲ್ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x50 ಪೂರ್ವ 60 ಅಡಿ ರಸ್ತೆಗೆ ಹೊಂದಿಕೊಂಡು ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**EC / ಇಸಿ, E-swathu, Khatha Change Building Licence & Other Property Documents**
96118-66449

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್ ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ : ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ಕಾರುಗಳು ಮಾರಾಟಕ್ಕಿವೆ**
Renault Kwid 2021
Skoda Rapid 2016
Innova Crysta Z 2016
Hyundai Creta 2019
ದೈವಿಕ್ ಐನಳ್ಳಿ
99456 43223

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 35x48 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ ಅಕ್ಕ-ಪಕ್ಕ, 40x45 ಪೂರ್ವ. ಡಾಲರ್ಸ್ ಕಾಲೋನಿಯಲ್ಲಿ 35x40 ಉತ್ತರ ಅಕ್ಕ-ಪಕ್ಕ 40x60 ಉತ್ತರ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
3 ರೂಂ ಡುಪ್ಲೆಕ್ಸ್ 1 ರೂಂ ಎಸಿ 2 ರೂಂ, 2 ಮನೆ, 3 1/2 ಚ.ಅಡಿ 1 ಮನೆ, 2 ರೂಂ 1 ಮನೆ, ಹಗೇದಿಬ್ಬ ಸರ್ಕಲ್, ಕುಂಬಾರ ಪೇಟೆ, ದಾವಣಗೆರೆ.
94497 68564

**ಬಾಡಿಗೆಗೆ ಇದೆ**
ವೆಜ್ ನಾನ್ ವೆಜ್ ಹೋಟೆಲ್ ಬಾಡಿಗೆಗೆ ಇದೆ, ಶಾಮನೂರು ರೋಡ್ ದಾವಣಗೆರೆ. ಸಂಪರ್ಕಿಸಿ :
98861 66432

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ.
98440 65638

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಟೈಲರ್ ಹಾಗೂ ಕೆಲಸದವರು ಬೇಕಾಗಿದ್ದಾರೆ. (ಹೆಣ್ಣು ಮಕ್ಕಳು)
ಸಂಪರ್ಕಿಸಿ :
81058 41314

**ಮನೆ ಬಾಡಿಗೆಗಿದೆ**
ಬಂಬೂಬಜಾರ್ ರಸ್ತೆ ಬಸಾಪುರದಲ್ಲಿ ಸಿಂಗಲ್ ಬೆಡ್ ರೂಂ ಇರುವ ಮನೆ, ಶ್ರೀನಿವಾಸ ಕಾನ್ವೆಂಟ್ ಹತ್ತಿರ, ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಮಾತ್ರ.
99451 11196, 83101 56711

**WANTED PHARMASIST**
CONTACT :
SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE.
98440 65638

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**HOUSE FOR RENT (2 BHK)**
# 3887, Old RTO Office, MCC `B' Block, Near Ayyappa swamy temple, Davanagere.
96111 04206

**ಮನೆ ಮಾರಾಟಕ್ಕಿದೆ**
ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ 20x35 ಮನೆ ಮಾರಾಟಕ್ಕಿದೆ. ಸ್ಥಳ : ಡಾಕ್ಟರ್ ಲೇಔಟ್, ಎಸ್. ಎಸ್. ಹೈಟೆಕ್ ರೋಡ್, ನಿಸರ್ಗ ಕಾನ್ವೆಂಟ್ ಪಕ್ಕ. ಸಂಪರ್ಕಿಸಿ :
78995 50339

**ಬೇಕಾಗಿದ್ದಾರೆ**
ವೃದ್ದರು, ರೋಗಿಗಳನ್ನು ಆರೈಕೆ ಮಾಡಲು ನಮ್ಮಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ. ನರ್ಸಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಬಳ 12,000 ರಿಂದ 18.000 (ಉಚಿತ ಊಟ, ವಸತಿ ಸೌಲಭ್ಯವಿದೆ)
81979 30800, 63661 41518

**ಸೈಟು ಮಾರಾಟಕ್ಕಿದೆ**
ಹಳೆ ಕುಂದುವಾಡದ ಸರ್ಕಾರಿ ಹೈಸ್ಕೂಲ್ ಹಿಂಭಾಗ 40×50 ವಿಸ್ತೀರ್ಣದ ಪಶ್ಚಿಮ-ದಕ್ಷಿಣ ಕಾರ್ನರ್ ಸೈಟ್ ಮಾರಾಟಕ್ಕಿರುತ್ತದೆ.
97432 09680

**ಹೊಸ ಮನೆ ಮಾರಾಟಕ್ಕಿದೆ**
30x40 ಸೈಜ್, ಉತ್ತರ ದಿಕ್ಕಿನ ಸೈಟ್‌ನಲ್ಲಿ 2 BHK ಮನೆ ಸಿದ್ದಗಂಗಾ ಲೇಔಟ್, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗ, ದಾವಣಗೆರೆ.
95384 86666, 63605 94165

**WANTED**
Computer Hardware Engineers
Vacancy 4 No. (15-20K)
Freshers Welcome
Vizion Computers
Send resume to Whatsapp
98860 94900

**ಬೇಕಾಗಿದ್ದಾರೆ PUC /DEGREE**
ಆದ ಮಹಿಳೆಯರು ರ‍್ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ: 6-30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಸ್ವೆಟ್‌ಪಾರ್ಕ್ ಫಿಟ್‌ನೆಸ್‌ನಲ್ಲಿ**
ರಿಸೆಪ್ಷನಿಸ್ಟ್ ಆಗಿ ಕಾರ್ಯನಿರ್ವಹಿಸಲು ಕಂಪ್ಯೂಟರ್ ಗೊತ್ತಿರುವ ಹಿಂದಿ, ಇಂಗ್ಲೀಷ್ ಗೊತ್ತಿರುವವರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
98453 55008,
74112 03440

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**ಬೇಕಾಗಿದ್ದಾರೆ**
ಲಿಂಗಾಯತರ ಮನೆಯಲ್ಲಿ ವೆಜ್ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ.
94483 38709
74830 48533

**ಬಾಡಿಗೆಗೆ ಇದೆ**
ಬಾರ್‌ನಲ್ಲಿ ರೆಸ್ಟೋರೆಂಟ್ ಮಾಡಲು ಎಲ್ಲಾ ಸಾಮಾನುಗಳಿವೆ, ರೆಸ್ಟೋರೆಂಟ್ ಬಾಡಿಗಿಗೆ ಇದೆ.
74830 48533
94483 38709

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.5.7.2023ರ ಬುಧವಾರ
ದಿ.6.7.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಯುವಕ, ಯುವತಿಯರು ಬೇಕಾಗಿದ್ದಾರೆ. ಡಿಗ್ರಿ ಪಾಸ್/ಫೇಲ್ ಸಂಬಳ : 20,000 ದಿಂದ 1,00,000ದವರೆಗೆ. ಸಂಪರ್ಕಿಸಿ.
ಎಸ್.ಎಸ್. ಇವೆಂಟ್ಸ್
96068 50128

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED**
SALES EXECUTIVES - Post. Male/ Female Experience in Sales field.
RECIPTIONIST - 1 post (Female only)
Attractive salary.
Contact :
Kabbur Furnitures
Beside Sulthan Diamonds & gold Showroom P.B Road, Davanagere.
98444 26300

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಎ ಬ್ಲಾಕ್‌ನಲ್ಲಿ 44x60 ಕೆಳಗಡೆ ಮನೆ, 2 ಬೆಡ್ ರೂಂ ಪಶ್ಚಿಮ ಮತ್ತು ಉತ್ತರ ಕಾರ್ನರ್ ಮನೆ ಲೀಜ್‌ಗೆ ಇದೆ. ಹಾಗೂ ಎಂಸಿಸಿ ಎ ಬ್ಲಾಕ್‌ನಲ್ಲಿ 1ನೇ ಫ್ಲೋರ್ ಬಾಡಿಗೆ ಇದೆ. 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98861 45736, 80734 67637

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದ್ದಾರೆ. ಅನುಭವ ವಿದ್ದವರಿಗೆ ಆದ್ಯತೆ.
94484 39639

**Immediately wanted Teachers**
B.Sc B.Ed- 03 Posts.
PCM / CBZ, Contact
95356 10817

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 81478 03755

**SSLC / PUC ಪಾಸ್ / ಫೇಲ್ - ಮುಂದೇನು ?**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ, ನೇರ ಪರೀಕ್ಷೆಗಳು : PUC -Arts / Com / Sci, NTC, BA, B.Com, MA, M.Com, MBA (ALL)
ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಲಾಯರ್ ರೋಡ್.
86602 35013

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೊರಿಯರ್ ಸೌಲಭ್ಯವಿದೆ)
87490 98879

**WE ARE HIRING!!**
Looking for people with minimum digital knowledge for our company. Salary upto 10,000-20,000. Interested people do contact :
Ph: 77602 57006

**SHOP FOR RENT**
MCC Block, Mama's joint road And Boys hostel road
82177 72482

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**WANTED**
S.V Marekting Davangere, P.B road, Harihara Road, Vinobhanagar, 4th Main
Sales and Collection Boy
ಸೇಲ್ಸ್ ಮತ್ತು ಕಲೆಕ್ಷನ್ ಹುಡುಗರು ಬೇಕಾಗಿದ್ದಾರೆ.
94480 46571, 78993 37571

**HOUSE FOR RENT**
2nd floor 40x30
Semi furnished
Swami Vivekanand Badavane Behind Mahesh PU College 7th B Main #4103. Contact :
89044 34445

**ಜಮೀನು ಮಾರಾಟಕ್ಕಿದೆ**
ದಾವಣಗೆರೆ-ಚನ್ನಗಿರಿ ಹೆದ್ದಾರಿ ಪಕ್ಕದ ಬಾಡದ ಪೆಟ್ರೋಲ್ ಬಂಕ್ ಹತ್ತಿರ, ಹೆದ್ದಾರಿಗೆ ಲಗತ್ತಾಗಿ ಸ.ನಂ. 172/1 ಮತ್ತು 172/3 ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ.
94487 12303, 94492 64631

## ನಗರದಲ್ಲಿಂದು ಶ್ರೀ ಗುರು ದತ್ತಾತ್ರೇಯ ಸ್ವಾಮಿಯ ಪ್ರತಿಷ್ಠಾಪನಾ ಸುಸ್ಮರಣೆ




ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ಆಶ್ರಯದಲ್ಲಿ ಶ್ರೀ ಗುರು ದತ್ತಾತ್ರೇಯ ಸ್ವಾಮಿಯ 37ನೇ ವಾರ್ಷಿಕೋತ್ಸವ, ಪ್ರತಿಷ್ಠಾಪನಾ ಸುಸ್ಮರಣಾ ದಿನಾಚರಣೆ ಮತ್ತು 108 ಶ್ರೀ ಸತ್ಯದತ್ತ ವ್ರತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಂಗವಾಗಿ ಪ್ರಾತಃಕಾಲ ಕಾಕಡಾರತಿ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ನಡೆಯಲಿವೆ. ಬೆಳಿಗ್ಗೆ 10 ಗಂಟೆಗೆ 108 ಕಳಶಗಳ ಶ್ರೀ ಸತ್ಯದತ್ತ ವ್ರತ ಪೂಜೆ, ಮಧ್ಯಾಹ್ನ 12.30 ಕ್ಕೆ ಮಂಗಳಾರತಿ, ತೀರ್ಥ-ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

ಸಂಜೆ 4.30 ಕ್ಕೆ ಶ್ರೀ ಸಾಯಿ ಭಜನಾ ಮಂಡಳಿ ಹಾಗೂ ಸಂಜೆ 6 ಗಂಟೆಗೆ ಶ್ರೀ ವೈಷ್ಣವಿ ಭಜನಾ ಮಂಡಳಿಯಿಂದ ಭಜನೆ ನಡೆಯಲಿದೆ.

## ಮಲೇಬೆನ್ನೂರಿನಲ್ಲಿ ಇಂದು ಹಡಪದ ಅಪ್ಪಣ್ಣ ಜಯಂತಿ



ಪುರಸಭೆ ಮತ್ತು ನಾಡಕಛೇರಿ ಹಾಗೂ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಪುರಸಭೆ ಕಛೇರಿ ಆವರಣದಲ್ಲಿ ವಚನಕಾರ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ಕೆ.ಬಿ. ನವೀನ್‌ಕುಮಾರ್ ತಿಳಿಸಿದ್ದಾರೆ.

# 'ಅರ್ಥ, ಕಾಮಗಳಿಗೆ ಆದ್ಯತೆ ಇಲ್ಲದ ಸರಳ ಬದುಕೇ ಶರಣ ಸಂಸ್ಕೃತಿ'

### ಡಾ.ಫ.ಗು.ಹಳಕಟ್ಟಿ ಜಯಂತಿ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ಎಚ್.ಬಿ ಮಂಜುನಾಥ್

ದಾವಣಗೆರೆ, ಜು.2 - ಅರ್ಥ, ಕಾಮಗಳಿಗೆ ಆದ್ಯತೆ ಇಲ್ಲದ ಸಹಜ ಬದುಕೇ ಶರಣ ಸಂಸ್ಕೃತಿಯಾಗಿದ್ದು, ಇದರ ವಾಚಿಕ ಅಭಿವ್ಯಕ್ತಿ ಅಥವಾ ಪ್ರತಿಪಾದನೆ ವಚನ ಸಾಹಿತ್ಯವಾಗಿದೆ. ವಚನ ಸಾಹಿತ್ಯದ ಪ್ರಚಾರ ಎಷ್ಟು ಮುಖ್ಯವೋ ಪ್ರಯೋಗ ಅಂದರೆ ಅನುಷ್ಠಾನವೂ ಅಷ್ಟೇ ಮುಖ್ಯ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಅಭಿಪ್ರಾಯಪಟ್ಟರು.



ನಗರದ ಸರಸ್ವತಿ ಬಡಾವಣೆಯ ಬಸವ ಬಳಗದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಬಸವ ಬಳಗದ ಸಹಯೋಗದಲ್ಲಿ ಇಂದು ಏರ್ಪಾಡಾಗಿದ್ದ ಡಾ.ಫ.ಗು. ಹಳಕಟ್ಟಿಯವರ ಜಯಂತಿ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಮತ್ತು ದತ್ತಿ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯ ಮತ್ತು ಡಾ.ಫ.ಗು.ಹಳಕಟ್ಟಿ' ವಿಷಯವಾಗಿ ಅವರು ಅನುಭಾವ ಉಪನ್ಯಾಸ ನೀಡಿದರು.

ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯವಾಗಿದ್ದು ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ಪಂಚ ಜ್ಞಾನೇಂದ್ರಿಯಗಳ ಅತೀತವಾದ ಆತ್ಮಾನುಭವವೇ 'ಅನುಭಾವ' ವಾಗಿದ್ದು ಮನೋವಿಕಾರಗಳಿಂದ ದೂರವಾದಾಗ ಆತ್ಮಕ್ಕಾಗುವ ಅನುಭವವೇ ಅನುಭಾವವೆನ್ನಬಹುದು ಎಂದರಲ್ಲದೆ ಇದರಿಂದ ಆತ್ಮ ಪರಿಶುದ್ಧತೆ ತನ್ಮೂಲಕ 'ಆತ್ಮೋದ್ಧಾರ', ಹಾಗೆಯೇ ಜಾತಿ, ಮತ, ಲಿಂಗ ವರ್ಗ ಭೇದವಿಲ್ಲದ 'ಸಮ ಸಮಾಜ', ನಾನು ದುಡಿಯಬೇಕು ಎನ್ನುವ 'ಕಾಯಕ' ಪ್ರಜ್ಞೆ, ಸೇವಿಸುವಲ್ಲಿ 'ನಾವು' ಎನ್ನುವ ವಿಶಾಲ 'ದಾಸೋಹ' ಪ್ರಜ್ಞೆ ಬಗ್ಗೆ ವಿವರಿಸಿದರು. 12ನೇಯ ಶತಮಾನದ ಬಸವಾದಿ ಶಿವ ಶರಣರ ವಚನಗಳು ಭಾಷೆಯಲ್ಲಿ ಕರ್ನಾಟಕಕ್ಕೆ ಸೀಮಿತವಾದರೂ ವಿಷಯ ವ್ಯಾಪ್ತಿಯು ವಿಶ್ವವಿಸ್ತಾರವಾದದ್ದು ಎಂದರು.

ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರ ಜೀವನ ಮತ್ತು ಸಾಧನೆಯ ಬಗ್ಗೆ ಅನೇಕ ಅಂಶಗಳನ್ನು ಮನಮುಟ್ಟುವಂತೆ ಹೇಳಿದ ಮಂಜುನಾಥ ಅವರು, ಹಳಕಟ್ಟಿಯವರ ಕುರಿತಾಗಿ ಕವಿ ಚನ್ನವೀರ ಕಣವಿ ರಚಿಸಿದ ಕವಿತೆಯನ್ನೂ ಸಹ ಹೇಳುತ್ತಾ ಅದರಲ್ಲಿನ ಸ್ವಾರಸ್ಯಕರ ಸಂಕೇತಾರ್ಥಗಳನ್ನು ಸಹ ವಿವರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಸವ ಬಳಗದ ಅಧ್ಯಕ್ಷ ಎ. ಹೆಚ್. ಹುಚ್ಚಪ್ಪ ಮಾಸ್ತರ್, ವಿಜಯ ನಗರ ಅರಸರ ಆಳ್ವಿಕೆ ಕಾಲದಲ್ಲಿ ಏಳು ನೂರಕ್ಕೂ ಹೆಚ್ಚು ಶಿವಶರಣರು ಶರಣ ಸಾಹಿತ್ಯವನ್ನು ಪ್ರಚುರ ಪಡಿಸುವ ಹಾಗೂ ಲಿಂಗಾಯತ ಧರ್ಮದ ಪುನರುತ್ಥಾನ ಕಾರ್ಯವು ಸಹ ಆಯಿತು ಎಂದರಲ್ಲದೇ ಉಪನಿಷತ್ತಿನಲ್ಲಿ ಇರುವುದೆಲ್ಲ ವಚನ ಸಾಹಿತ್ಯದಲ್ಲಿ ಇದೆ. ಆದರೆ ಉಪನಿಷತ್ತಿನಲ್ಲೂ ಇಲ್ಲದ ವಿಚಾರಗಳು ಸಹ ವಚನ ಸಾಹಿತ್ಯದಲ್ಲಿವೆ ಎಂಬ ಕೀರ್ತಿ ಶೇಷ ರಂಗನಾಥ ದಿವಾಕರರ ಅಭಿಪ್ರಾಯವನ್ನು ಪುನರುಚ್ಚರಿಸಿದರು.

ಗೌರವ ಉಪಸ್ಥಿತರಾಗಿದ್ದ ದಾವಣಗೆರೆ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ವಿನೋದ ಅಜಗಣ್ಣನವರ್ ಮಾತನಾಡಿ, ಸಮಾಜದ ಓರೆ ಕೋರೆ, ಅಂಕು-ಡೊಂಕು ಅಂತರಂಗದ ಕತ್ತಲೆ ಕಳೆಯಲು ವಚನ ಸಾಹಿತ್ಯ ಸಮರ್ಥ ಸಾಧನ, ಇದು ಸಾರ್ವಕಾಲಿಕ ಸತ್ಯ ಎಂದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷೀಯ ನುಡಿಗಳನ್ನಾಡಿದರು.

ಪ್ರಾರ್ಥನೆಯನ್ನು ಬಸವ ಬಳಗದ ಸದಸ್ಯರು ಹಾಡಿದರೆ, ಸ್ವಾಗತವನ್ನು ಕಾರ್ಯದರ್ಶಿ ಎಂ.ಎಸ್ ರಾಜು ಕೋರಿದರು.

ದತ್ತಿದಾನಿಗಳಾದ ಹೆಚ್. ಎಂ. ಮಂದಾಕಿನಿ ಸ್ವಾಮಿ, ಲಿಂ. ಸಣ್ಣಮ್ಮ ಲಿಂ. ಸಿದ್ದವೀರಪ್ಪ ಕೆ.ಶೆಟ್ಟರ ದತ್ತಿಯ ಶ್ರೀ ವಿಭೂತಿ ಬಸವಾನಂದ, ಬಸವ ಧರ್ಮ ಪ್ರಚಾರಕರು, ಶ್ರೀಮತಿ ಮೀನಾಕ್ಷಮ್ಮ ಲಿಂ.ದೇವಿಗೆರೆ ವೀರಭದ್ರಪ್ಪ, ದತ್ತಿ ಗಿರೀಶ್ ಡಿ.ವಿ. ಮುಂತಾದವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಾಹಿತ್ಯ ಪರಿಷತ್ ಖಜಾಂಚಿ ಆರ್. ಸಿದ್ದೇಶ್, ಕಾರ್ಯದರ್ಶಿ ಪಂಕಜ ದಯಾನಂದ ಮುಂತಾದವರು ಭಾಗವಹಿಸಿದ್ದರು. ಪ್ರಕಾಶ್ ವಂದಿಸಿದರು.

# ಅಂಕ ಗಳಿಕೆಗಿಂತ ಕೌಶಲ್ಯ ರೂಢಿಸಿಕೊಳ್ಳಬೇಕು



> ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಕಾರ್ಯಕ್ರಮದಲ್ಲಿ ದಾವಣಗೆರೆ ವಿವಿ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಬಿ.ಕೆ. ರಂಗಪ್ಪ

ದಾವಣಗೆರೆ, ಜು. 2- ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗಿಂತ ಕೌಶಲ್ಯವನ್ನು ಕಲಿಯಲು ಮುಂದಾಗಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಆಸಕ್ತಿ ತೋರಬೇಕೆಂದು ದಾವಣಗೆರೆ ವಿವಿ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಬಿ.ಕೆ. ರಂಗಪ್ಪ ಕರೆ ನೀಡಿದರು.

ನಗರದ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ 2022-23 ನೇ ಸಾಲಿನ ವಿದ್ಯಾರ್ಥಿ ಸಂಘ, ಎನ್ನೆಸ್ಸೆಸ್, ಯುವ ರೆಡ್‌ಕ್ರಾಸ್, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಮೈದಾನದಲ್ಲಿ ಆಟವಾಡುವುದನ್ನು ಬಿಟ್ಟು ಮೊಬೈಲ್ ನಲ್ಲಿ ಆಟಗಳನ್ನಾಡುತ್ತಿದ್ದಾರೆ. ಇದರಿಂದ ಸೋಲುವುದನ್ನು ಕಲಿಯಲಾಗದು. ಮೊಬೈಲ್ ಆಟಗಳು ಗೆಲುವನ್ನೇ ಬಯಸುತ್ತವೆ. ಇದರಿಂದ ಮಕ್ಕಳು ಬೇಗ ನಿರಾಸೆಗೆ, ಆಶಾ ಭಂಗಕ್ಕೆ ಒಳಗಾಗುತ್ತಾರೆ. ನಿಮ್ಮನ್ನು ನೀವೇ ಗುರುತಿಸಿಕೊಂಡು ನೀವೇ ಬೆಳೆಯಬೇಕು. ಪ್ರತಿ ಜೀವಿಗೂ ತನ್ನದೇ ಆದ ಸಾಮರ್ಥ್ಯ ಇರುತ್ತದೆ. ಅದರ ಸದ್ವಿನಿಯೋಗ ಮಾಡಿಕೊಳ್ಳಬೇಕೆಂದರು.

ವಿದ್ಯಾರ್ಥಿಗಳು ತಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನು ಅನಾವರಣ ಮಾಡುವ ಮೂಲಕ ಕಾಲೇಜಿಗೆ, ಪೋಷಕರಿಗೆ ಕೀರ್ತಿ ತರುವಂತೆ ಮನವಿ ಮಾಡಿದರು.

ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಲಾಭಕ್ಕಾಗಿ ನಾವು ವಿದ್ಯಾಸಂಸ್ಥೆಯನ್ನು ತೆರೆದಿಲ್ಲ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ನಾಣ್ಣುಡಿಯಂತೆ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಲಾಗುತ್ತಿದೆ ಎಂದರು.

ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು ಸಂಸ್ಥೆಯ ಉದ್ದೇಶವಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡು ಸಂಸ್ಥೆಯನ್ನು ಮುನ್ನಡೆಸಲಾಗುವುದು ಎಂದು ಹೇಳಿದರು.

ಶ್ರೀ ವಿನಾಯಕ ಟ್ರಸ್ಟ್ ಟ್ರಸ್ಟಿ ಎಸ್.ಕೆ. ವೀರಣ್ಣ ಮಾತನಾಡಿ, ಸಂಬಳ ಮುಖ್ಯ ಅಲ್ಲ. ಬದ್ಧತೆಯಿಂದ ಕೆಲಸ ಮಾಡುವುದು ಮುಖ್ಯ. ಶಿಕ್ಷಣದ ಮೂಲಕ ದೈಹಿಕವಾಗಿ, ಮಾನಸಿಕವಾಗಿ ಬೆಳೆಯಬಹುದು. ನಮ್ಮ ಸಂಸ್ಥೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡುತ್ತಿದೆ. ವಿದ್ಯಾರ್ಥಿಗಳು ದೇಶ, ಸಮಾಜಕ್ಕೆ ಕೊಡುಗೆ ನೀಡುವ ಸತ್ಪ್ರಜೆಗಳಾಗಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಸಿ. ಗುರು ಪ್ರಾಸ್ತಾವಿಕವಾಗಿ ಮಾತನಾಡಿ, ಜುಲೈ 2 ಕ್ಕೆ ಕಾಲೇಜು 18 ವರ್ಷ ಪೂರೈಸುತ್ತದೆ. 64 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಕಾಲೇಜು, ಇದೀಗ 768 ವಿದ್ಯಾರ್ಥಿಗಳನ್ನು ಹೊಂದಿದೆ. ಸಕಲ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತವಾದ ಕಾಲೇಜು ನಮ್ಮದು ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಬಡವರು, ಹಿಂದುಳಿದ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಕೈಗೆಟಕುವ ಶುಲ್ಕ, ಅನುಭವಿ ಉಪನ್ಯಾಸಕ ವೃಂದ ಇದ್ದು, ಪೋಷಕರ ಆಸೆ ಈಡೇರಿಸಲು ಮುಂದಾಗುವಂತೆ ಸಲಹೆ ನೀಡಿದರು.

ಇದೇ ವೇಳೆ 2023 ರ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆಯಾಗಿದ್ದ ಎನ್ನೆಸ್ಸೆಸ್ ಸ್ವಯಂ ಸೇವಕ ನಂದನ್ ಕುಮಾರ್ ಎಂ.ಹೆಚ್. ಇವರನ್ನು ಸನ್ಮಾನಿಸಲಾಯಿತು.

ಎಸ್‌ಬಿಸಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ ಉಪಸ್ಥಿತರಿದ್ದರು. ಶಿಫಾ ಅಂಜುಮ್ ಸ್ವಾಗತಿಸಿದರು. ಸಾಹಿತ್ಯ ನಿರೂಪಿಸಿದರು. ಪವಿತ್ರ ವಂದಿಸಿದರು.

## ನಗರದಲ್ಲಿ ಇಂದು ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಚಾಣಕ್ಯ ಪದವಿ ಮತ್ತು ಪದವಿ ಪೂರ್ವ ಕಾಲೇಜಿನ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು, ವಿದ್ಯಾರ್ಥಿ ಸಂಘ, ಎನ್ನೆಸ್ಸೆಸ್, ರೆಡ್‌ಕ್ರಾಸ್, ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ವಿದ್ಯಾನಗರ ಪೊಲೀಸ್ ಠಾಣೆಯ ಪಿಎಸ್‌ಐ ಪ್ರಭಾವತಿ ಸಿ. ಶೇತ ಸನದಿ, ಪ್ರಾಚಾರ್ಯ ಕೆ. ರಾಜಶೇಖರ್, ಡೀನ್ ಸ್ವಾಮಿ, ಕಾಲೇಜಿನ ಅಧ್ಯಕ್ಷ ನಾಗರಾಜ್ ಶೆಟ್ಟಿ, ರೂಪ, ನಾಗರಾಜ್ ರಾವ್ ಮತ್ತಿತರರು ಭಾಗವಹಿಸಲಿದ್ದಾರೆ.

# ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿಗೆ ಎಸ್ಪಿ ಚಾಲನೆ



ದಾವಣಗೆರೆ, ಜು. 2- ಜಿಲ್ಲಾ ವರದಿಗಾರರ ಕೂಟದ ವತಿಯಿಂದ ಪತ್ರಿಕಾ ದಿನಾಚರಣೆ ಪ್ರಯುಕ್ತ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ವರದಿಗಾರರ ಕೂಟದ ಸದಸ್ಯರಿಗೆ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿತ್ತು.

ಬೆಳಿಗ್ಗೆಯಿಂದಲೇ ಪಂದ್ಯಗಳನ್ನು ಆರಂಭಿಸಿದ ಕ್ರೀಡಾಪಟುಗಳು ಅತ್ಯಂತ ಹುರುಪಿನಿಂದ ಪಾಲ್ಗೊಂಡಿದ್ದರು. ಆದರೆ ವರುಣನ ಅವಕೃಪೆಯಿಂದಾಗಿ ಆಟಕ್ಕೆ ಅಡ್ಡಿಯಾಯಿತು.

ಪ್ರತಿ ತಂಡದಲ್ಲಿ ಹದಿನಾರು ಸದಸ್ಯರಿರುವ ನಾಲ್ಕು ತಂಡಗಳನ್ನು ರಚಿಸಿ, ಐದು ಓವರ್‌ಗಳಿಗೆ ಪಂದ್ಯವನ್ನು ನಿಗದಿಗೊಳಿಸಿ, ಲೀಗ್ ಮಾದರಿಯಲ್ಲಿ ಪಂದ್ಯಗಳನ್ನು ನಡೆಸಲಾಯಿತು.

ಮಧ್ಯಾಹ್ನ ಜಿಲ್ಲಾ ಪೊಲೀಸ್ ತಂಡ ಹಾಗೂ ಪತ್ರಕರ್ತರ ತಂಡದ ನಡುವಿನ ಪಂದ್ಯಕ್ಕೆ ಎಸ್ಪಿ ಡಾ. ಕೆ ಅರುಣ್ ಚಾಲನೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಡಿವೈಎಸ್ಪಿ ಪ್ರಕಾಶ್, ಮಲ್ಲೇಶ್ ದೊಡ್ಡಮನಿ, ಹಿರಿಯ ಪತ್ರಕರ್ತರಾದ ಸದಾನಂದ ಹೆಗಡೆ, ಎಂ.ಬಿ. ನವೀನ್, ಸಿದ್ಧಯ್ಯ ಹಿರೇಮಠ, ನಾಗರಾಜ್ ಬಡದಾಳ್, ಮಂಜುನಾಥ್ ಪಿ. ಕಾಡಜ್ಜಿ, ಎ. ಫಕ್ರುದ್ದೀನ್, ಡಾ. ಸಿ. ವರದರಾಜ್, ಮಧು ನಾಗರಾಜ್, ಎನ್.ವಿ. ಬದರಿನಾಥ್, ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಸೇರಿದಂತೆ ಹಿರಿಯ, ಕಿರಿಯ ಪತ್ರಕರ್ತರು, ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವರದಿಗಾರರ ಕೂಟದ ಸದಸ್ಯರು ಪಾಲ್ಗೊಂಡಿದ್ದರು.

## ಹರಿಹರ ಸಾಯಿಬಾಬಾ ಮಂದಿರದಲ್ಲಿ ವರುಣನ ಕೃಪೆಗಾಗಿ ಇಂದು ಪೂಜೆ



ಪಾಟೀಲ್ ಬಡಾವಣೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ 7ನೇ ವರ್ಷದ ಗುರುಪೂರ್ಣಿಮೆ ಪ್ರಯುಕ್ತ ವರುಣನ ಕೃಪೆಗಾಗಿ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಂದಿರದ ಅಧ್ಯಕ್ಷ ಬಸವರಾಜ್ ಪಾಟೀಲ್ ತಿಳಿಸಿದ್ದಾರೆ. ಸಾಯಿಬಾಬಾ ಮಂದಿರದಲ್ಲಿ ಗುರುಪೂರ್ಣಿಮೆ ವರುಣನ ಕೃಪೆ ಹಾಗೂ ಲೋಕ ಕಲ್ಯಾಣಾರ್ಥ ಇಂದು ಬೆಳಗ್ಗೆ 6-30 ಕ್ಕೆ ಶ್ರೀ ಸಿದ್ದಿವಿನಾಯಕ, ಶ್ರೀ ಶಿರಡಿ ಸಾಯಿಬಾಬಾ, ಶ್ರೀ ಕಾಶಿ ವಿಶ್ವನಾಥ, ನವಗ್ರಹ, ಬಸವೇಶ್ವರ ಮೂರ್ತಿಗಳಿಗೆ ಸಾರ್ವಜನಿಕರಿಂದ ಕ್ಷೀರಾಭಿಷೇಕ, ವಿಶೇಷ ಅಲಂಕಾರ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನಂತರ ಮಧ್ಯಾಹ್ನ 12-30 ಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಗುರುಪೂರ್ಣಿಮೆ ವಿಶೇಷ ಪೂಜೆ



ದಾವಣಗೆರೆ : ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕಡ್ಲಿಗಡುಬ ಹುಣ್ಣಿಮೆ (ಗುರು ಪೂರ್ಣಿಮೆ) ಪ್ರಯುಕ್ತ ಇಂದು ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಸರೋಜಮ್ಮ ಕಡೇಕೊಪ್ಪ ಮತ್ತು ಶ್ರೀಮತಿ ರಾಜೇಶ್ವರಿ ರಾಜು ಕಡೇಕೊಪ್ಪ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಗರದಲ್ಲಿ ಇಂದು ಗುರುಪೌರ್ಣಿಮೆ

ಗುರುದೇವ ಶ್ರೀ ರವಿಶಂಕರ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಶ್ರೀ ಸದ್ಯೋಜಾತ ಮಠದಲ್ಲಿ ಇಂದು ಸಂಜೆ 7 ಗಂಟೆಗೆ ಗುರು ಪೌರ್ಣಿಮೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

## ಇಂದು ಯೋಗ ಶಿಕ್ಷಕರಿಗೆ ಗುರುವಂದನೆ

ಸಂಕಲ್ಪ ಸೇವಾ ಫೌಂಡೇಶನ್ ಆಶ್ರಯದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ಯೋಗ ಶಿಕ್ಷಕರುಗಳಿಗೆ ಗುರುವಂದನಾ ಕಾರ್ಯಕ್ರಮವು ಇಂದು ಸಂಜೆ 6.30 ಕ್ಕೆ ಹಾಲಕೆರೆ ಅನ್ನದಾನೇಶ್ವರ ಸಾರ್ವಜನಿಕ ಸೇವಾ ಟ್ರಸ್ಟ್‌ನಲ್ಲಿ ನಡೆಯಲಿದೆ.

ಸಾನ್ನಿಧ್ಯವನ್ನು ಬ್ರಹ್ಮಾಕುಮಾರಿ ಲೀಲಾಜಿ ವಹಿಸುವರು. ಜಿ. ಮಹಾಂತೇಶ್ ಅಧ್ಯಕ್ಷತೆ ವಹಿಸುವರು. ಕೆ. ಕರಿಬಸಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಅಥಣಿ ವೀರಣ್ಣ, ಡಾ. ಹೆಚ್.ಎನ್. ಮಲ್ಲಿಕಾರ್ಜುನಪ್ಪ, ಶ್ರೀನಿವಾಸ ದಾಸಕರಿಯಪ್ಪ, ಮಂಜುನಾಥ ಇ.ಎಂ., ವಾಸುದೇವ ರಾಯ್ಕರ್, ಎನ್ ಅಡಿವೆಪ್ಪ, ವೀರಪ್ಪ ಎಂ. ಬಾವಿ, ಪ್ರಕಾಶ್ ಉತ್ತಂಗಿ ಆಗಮಿಸುವರು.

## ವಸಂತಪ್ಪ ನಿವೃತ್ತಿ : ಶಿವಸೈನ್ಯ ಅಭಿನಂದನೆ



ದಾವಣಗೆರೆ, ಜು. 2 - ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದ ವ್ಯವಸ್ಥಾಪಕರಾಗಿ 23 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ವೈ. ವಸಂತಪ್ಪ ಅವರು ನಿವೃತ್ತಿ ಹೊಂದಿದ್ದಾರೆ. ಇವರನ್ನು ಶಿವಸೈನ್ಯ ಯುವಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶಶಿಧರ ಹೆಮ್ಮನಬೇತೂರು, ಲಿಂಗರಾಜ್ ಅಗಸನಕಟ್ಟೆ, ಕೊರಟಿಕೆರೆ ಶಿವಕುಮಾರ್, ಪ್ರಭು ಕಾವಲಹಳ್ಳಿ, ಸತೀಶ್ ಸಿರಿಗೆರೆ, ಭೀಮಣ್ಣ ಹೊನ್ನೇನಹಳ್ಳಿ, ಧನ್ಯಕುಮಾರ್ ಎಲೆಬೇತೂರು, ನಿರಂಜನ್ ಹಂಪನೂರು ಮತ್ತಿತರರು ಉಪಸ್ಥಿತರಿದ್ದರು.

## ಓದುಗರ ಪತ್ರ

### ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ ಮತ್ತು ಮಾರಾಟಕ್ಕೆ ನಿಷೇಧ ಸ್ವಾಗತಾರ್ಹ

ಮಾನ್ಯರೇ,

2023ರ 51ನೇ ವರ್ಷದ ವಿಶ್ವ ಪರಿಸರ ದಿನಾಚರಣೆಯಲ್ಲಿ "ಪ್ಲಾಸ್ಟಿಕ್ ಮಾಲಿನ್ಯ ಮೆಟ್ಟಿ ನಿಲ್ಲೋಣ"ಎಂಬ ಧ್ಯೇಯ ವಾಕ್ಯ ದೊಂದಿಗೆ ಆಚರಿಸಲಾಗಿದೆ. ಅದಕ್ಕೆ ಪೂರಕವಾಗಿ ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾರವರು, ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ ಮಾರಾಟ ನಿಷೇಧಿಸಲಾಗಿದೆ ಎಂದು ಆಜ್ಞೆ ಹೊರಡಿಸಿರುವುದು ಜನತಾವಾಣಿ ಮತ್ತಿತರೆ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕ್ರಮವನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ.

ದಾವಣಗೆರೆಯ ಕರುಣಾ ಟ್ರಸ್ಟ್ ಮತ್ತಿತರೆ ಪರಿಸರ ಜಾಗೃತಿ ಸಮುದಾಯಗಳು ಪ್ಲಾಸ್ಟಿಕ್ ನಿಷೇಧ ಕುರಿತು ಅರಿವು, ಜಾಗೃತಿ, ಹೋರಾಟ ಮಾಡುತ್ತಾ ಬಂದಿದ್ದಾರೆ. ಪ್ಲಾಸ್ಟಿಕ್ ಉಪಯೋಗದಿಂದ ದನಕರುಗಳು ಆಹಾರ ಸೇವನೆ ಜೊತೆಗೆ ಪ್ಲಾಸ್ಟಿಕ್ ಸೇವಿಸಿ ಜೀವಹಾನಿ ಮಾಡಿಕೊಳ್ಳುತ್ತಿವೆ. ಅಲ್ಲದೆ ಜನರು ತಮ್ಮ ಉಪಹಾರ, ಊಟ ಪ್ಲಾಸ್ಟಿಕ್ ಚೀಲದಲ್ಲಿಯೇ ತಂದು ತಿನ್ನುವುದರಿಂದ ಕ್ಯಾನ್ಸರ್ ಮುಂತಾದ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಅಲ್ಲದೆ ಅಂಗಡಿಗಳಲ್ಲಿ ಪ್ರತಿಯೊಂದು ಸಾಮಾನು ಖರೀದಿಸುವಾಗಲು ಪ್ಲಾಸ್ಟಿಕ್ ಚೀಲ ಕೊಡುವುದರಿಂದ ಕಸದ ಸಮಸ್ಯೆ ಆಗಿದೆ. ಎಲ್ಲೆಡೆ ಪ್ಲಾಸ್ಟಿಕ್ ಚೆಲ್ಲಿರುವುದರಿಂದ ಭೂಮಿಯು ಸಹ ಪ್ಲಾಸ್ಟಿಕ್ ಮಯವಾಗಿದೆ. ಅಲ್ಲದೆ ಪ್ಲಾಸ್ಟಿಕ್, ಕಸ ಕಡ್ಡಿಗಳಂತೆ ಭೂಮಿಯಲ್ಲಿ ಕರಗದೆ ಹಾಗೆಯೇ ಉಳಿಯುತ್ತದೆ.

ಪ್ಲಾಸ್ಟಿಕ್ ನಿಷೇಧ ಸಂತೋಷದಾಯಕವಾಗಿದ್ದರೂ ಇದು ಕಾರ್ಯಗತವಾಗಲು ಆದೇಶದಿಂದ ಮಾತ್ರ ಸಾಧ್ಯವಿಲ್ಲ. ಆಡಳಿತಾಧಿಕಾರಿಗಳು ಬದ್ಧರಾಗಿ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು. ಸಾರ್ವಜನಿಕರು ಮಾರುಕಟ್ಟೆಗಳಿಗೆ ಹೋಗುವಾಗ ಬಟ್ಟೆ ಚೀಲಗಳನ್ನು ತೆಗೆದುಕೊಂಡು ಹೋಗಿ ಸಹಕರಿಸಬೇಕು.

ಪ್ರಸ್ತುತ ನಾವು ಆರು ಲಕ್ಷ ಜನರು ಕಸ ಎಲ್ಲೆಂದರಲ್ಲಿ ಎಸೆಯದೇ ಪರಿಸರ ರಕ್ಷಣೆ ಜವಾಬ್ದಾರಿ ವಹಿಸಿಕೊಂಡು, ನಮ್ಮನಮ್ಮ ಕಸವನ್ನು ಪರಿಸರಕ್ಕೆ ಹಾನಿಯಾಗದಂತೆ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡೋಣವೇ? ಅಥವಾ ನಗರ ಪಾಲಿಕೆಗೆ ಸಹಕರಿಸುವುದರೊಂದಿಗೆ ದಾವಣಗೆರೆ ನಗರವನ್ನು ಸ್ವಚ್ಛವಾಗಿಡಿಸಿ, ಕರ್ನಾಟಕದಲ್ಲೇ ಮಾದರಿ ಮತ್ತು ಸುಂದರ ನಗರವನ್ನಾಗಿಸೋಣವೇ ?

- ಶಿವನಕೆರೆ ಬಸವಲಿಂಗಪ್ಪ,
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಗುರು ಪೂರ್ಣಿಮೆ, ಶಿವಾನುಭವ ಗೋಷ್ಠಿ

ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ 268ನೇ ಗುರು ಪೂರ್ಣಿಮೆ, ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ (ಆವರಗೊಳ್ಳ), ಶ್ರೀ ಕಲ್ಲಯ್ಯಜ್ಜನವರು (ಶ್ರೀ ವೀರೇಶ್ವರ ಪುಣ್ಯಾಶ್ರಮ) ವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಎ.ಹೆಚ್. ಶಿವಮೂರ್ತಿ ಸ್ವಾಮಿ, ರವೀಂದ್ರನಾಥ ಸಾಣೇಹಳ್ಳಿ, ಶ್ರೀಮತಿ ಕಲ್ಪನಾ, ಎಸ್. ನೀಲಕಂಠಪ್ಪ ಆಗಮಿಸುವರು.

# ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನಿಲ್ಲಿಸಬಾರದು

### ಲಕ್ಕಶೆಟ್ಟಿಹಳ್ಳಿ : ಸನ್ಮಾನ ಕಾರ್ಯಕ್ರಮದಲ್ಲಿ ಸರ್ಕಾರಕ್ಕೆ ಶಾಸಕ ಹರೀಶ್ ಮನವಿ

ಮಲೇಬೆನ್ನೂರು, ಜು.2- ಗ್ಯಾರಂಟಿ ಯೋಜನೆಗಳ ಭರವಸೆಯಿಂದಾಗಿ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದಲ್ಲಿ ಹೆಚ್ಚು ಮತಗಳು ಬಿದ್ದಿವೆ. ಜನರ ನಂಬಿಕೆಗೆ ದಕ್ಕೆಯಾಗದಂತೆ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಹೇಳಿದಂತೆ ಜಾರಿಗೊಳಿಸಿ ಎಂದು ಶಾಸಕ ಬಿ.ಪಿ. ಹರೀಶ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಯಲವಟ್ಟಿ ಗ್ರಾ.ಪಂ ವ್ಯಾಪ್ತಿಯ ಲಕ್ಕಶೆಟ್ಟಿ ಹಳ್ಳಿ ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುವುದನ್ನು ನಿಲ್ಲಿಸಬಾರದು. ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಶಾಸಕರಿಗೆ ಅನುದಾನ ನೀಡಬೇಕೆಂದು ಹರೀಶ್ ಸರ್ಕಾರಕ್ಕೆ ಮನವಿ ಮಾಡಿದರು.

ನಾನು ಈ ಬಾರಿ 20 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆಲ್ಲುವ ವಾತಾವರಣವಿತ್ತು. ಆದರೆ ಕಾಂಗ್ರೆಸ್ ಗ್ಯಾರಂಟಿಗಳು ನನ್ನ ಗೆಲುವಿನ ಅಂತರವನ್ನು ಕಡಿಮೆ ಮಾಡಿದವು ಎಂದ ಹರೀಶ್ ಅವರು, 2008 ರಲ್ಲಿ ನಡೆದ ಅಭಿವೃದ್ಧಿ ಯೋಜನೆಗಳು ಇಂದಿಗೂ ಹಸಿರಾಗಿವೆ. ಈ ಬಾರಿಯೂ ಕಾಂಗ್ರೆಸ್ ಪಕ್ಷದವರ ವಿಶ್ವಾಸ ಪಡೆದು ಕ್ಷೇತ್ರದ ಅಭಿವೃದ್ಧಿಗೆ ಹೋರಾಟ ಮಾಡುತ್ತೇನೆ. ಲಕ್ಕಶೆಟ್ಟಿ ಗ್ರಾಮಸ್ಥರ ಅಭೂತಪೂರ್ವ ಬೆಂಬಲಕ್ಕೆ ನಾನು ಚಿರಋಣಿ ಎಂದು ಹರೀಶ್ ಕೃತಜ್ಞತೆ ಸಲ್ಲಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಕೂಡ ಸನ್ಮಾನ ಸ್ವೀಕರಿಸಿ ಮಾತನಾಡಿ, ಅಧಿಕಾರ ಇರಲಿ, ಬಿಡಲಿ ಕ್ಷೇತ್ರದ ಜನರ ಸೇವೆಗೆ ಸದಾ ಸಿದ್ಧ ಎಂದರು.

ಯಲವಟ್ಟಿ ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಕರಿಬಸಮ್ಮ ಮಲ್ಲಿಕಾರ್ಜುನಪ್ಪ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಎಲ್.ಎನ್. ನಾಗರಾಜ್, ಬಿಜೆಪಿ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಕಿಕೆರೆ ಅಣ್ಣಪ್ಪ, ಗ್ರಾಮದ ಮುಖಂಡರಾದ ಮಲ್ಲಿಕಾರ್ಜುನಪ್ಪ, ಗೌಡ್ರ ಚಂದ್ರಪ್ಪ, ಚಂದ್ರಪ್ಪ ಸ್ವಾಮಿ, ಮಾಸ್ಟಿ ಹನುಮಂತಪ್ಪ, ಮಹಾಲಿಂಗಯ್ಯ, ಎಂ. ನಾಗರಾಜ್, ಸಾರಥಿ ಯಶವಂತ್, ಅನ್ವೇರಿ ಷಣ್ಮುಖಪ್ಪ, ನಲುವಾಗಲು ಜಯಪ್ಪ, ಬಿಳಸನೂರು ನಾಗಪ್ಪ, ನಾಗಸನಹಳ್ಳಿ ವಿರೂಪಾಕ್ಷಪ್ಪ, ಶಾಮನೂರು ಮುರಿಗೆಪ್ಪ, ಗೌಡ್ರ ಪ್ರಕಾಶ್, ಗುಳ್ಳಪ್ಪ, ನಾರಪ್ಪ, ಮಂಜುನಾಥ್, ಬಾರ್ಕಿ ತಿಪ್ಪೇಶ್, ಸುರೇಶ್, ಕಾಳಪ್ಪ, ನಿಂಗರಾಜ್, ರಾಯಣ್ಣ, ಮಂಜಪ್ಪ, ಕೆ. ರೇವಣಸಿದ್ದಪ್ಪ ಮತ್ತು ಮಲೇಬೆನ್ನೂರಿನ ಪಿ.ಆರ್. ರಾಜು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

RS ENTERPRISES
Near New DC Office, Karur Industrial Area Davangere.
Job Requirement for Accountant 2 experienced in Accounts and GST Filing, Tally. Male or Female
Job Requirement for Telecalling and Kannada Typing Minimum 2 years Experience only for female.
Send Resume or whatsapp & Contact No. : 78999 27530

# ಏಕರೂಪ ನಾಗರಿಕ ಸಂಹಿತೆಗೆ ವಿರೋಧ



ದಾವಣಗೆರೆ, ಜು.2- ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಬಗ್ಗೆ ಕೇಂದ್ರ ಸರ್ಕಾರ ಪ್ರಸ್ತಾಪಿಸುತ್ತಿರುವುದನ್ನು ವಿರೋಧಿಸಿ, ಮುಸ್ಲಿಂ ಒಕ್ಕೂಟದಿಂದ ನಗರದಲ್ಲಿ ಭಾನುವಾರ ನಾನು ಏಕರೂಪ ನಾಗರಿಕ ಸಂಹಿತೆಯನ್ನು ತಿರಸ್ಕರಿಸುತ್ತೇನೆ ಎಂಬ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುವ ಮೂಲಕ ವಿರೋಧ ವ್ಯಕ್ತಪಡಿಸಿತು.

ಇಲ್ಲಿನ ಆಜಾದ್ ನಗರ 1ನೇ ಮುಖ್ಯರಸ್ತೆಯಲ್ಲಿ ವಕೀಲ ನಜೀರ್ ಅಹಮ್ಮದ್ ಕಚೇರಿಯಲ್ಲಿ ಮುಸ್ಲಿಂ ಒಕ್ಕೂಟದಿಂದ ಏಕರೂಪ ನಾಗರಿಕ ಸಂಹಿತೆ ವಿರುದ್ಧ ಘೋಷಣೆ ಕೂಗಿ ಅಸಹನೆ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಒಕ್ಕೂಟದ ಸಂಚಾಲಕ ವಕೀಲ ನಜೀರ್ ಅಹಮ್ಮದ್, ನಮ್ಮ ದೇಶದಲ್ಲಿ ಪರಿಹರಿಸಲಾಗದೇ ಉಳಿದ ಅನೇಕ ಸಮಸ್ಯೆಗಳಿವೆ. ಕೇಂದ್ರ ಸರ್ಕಾರವು ಮೊದಲು ಅವುಗಳನ್ನು ಬಗೆಹರಿಸಲು ಮುಂದಾಗಲಿ. ಅದನ್ನು ಬಿಟ್ಟು ಏಕರೂಪ ನಾಗರಿಕ ಸಂಹಿತೆ ವಿಚಾರವಾಗಿ ವಿನಾಃಕಾರಣ ಅನಗತ್ಯವಾಗಿ ಹಸ್ತಕ್ಷೇಪ ಮಾಡುತ್ತಿರುವುದು ಸರಿಯಲ್ಲ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮೂಗು ತೂರಿಸುತ್ತಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಜನ ಸಾಮಾನ್ಯರು ಉತ್ತಮವಾಗಿ ನೆಮ್ಮದಿಯ ಜೀವನ ನಡೆಸಲು ಬೇಕಾದ ಮಾದರಿಯಲ್ಲಿ ಆಡಳಿತ ನಡೆಸುವ ಕೆಲಸವನ್ನು ಕೇಂದ್ರದ ಬಿಜೆಪಿ ಸರ್ಕಾರ ಮಾಡಲಿ. ಮುಸ್ಲಿಂ ಸಮುದಾಯದ ಜನರು ಯಾವುದೇ ಅಡ್ಡಿ, ಆತಂಕವಿಲ್ಲದೇ ಉತ್ತಮವಾಗಿ ಜೀವನ ನಡೆಸುತ್ತಿದ್ದಾರೆ. ಹೀಗಿರುವಾಗ ಕೇಂದ್ರ ಸರ್ಕಾರವು ಯಾವುದೇ ಕಾರಣಕ್ಕೂ ಮಧ್ಯ ಪ್ರವೇಶಿಸಿ, ಸಮಸ್ಯೆ ತಂದಿಡುವುದು ಸರಿಯಲ್ಲ. ಕೇಂದ್ರ ಸರ್ಕಾರವು ಮುಸ್ಲಿಮರಿಗೆ ಸಂವಿಧಾನ ನೀಡಿರುವ ವಿಶೇಷ ವೈಯಕ್ತಿಕ ಕಾನೂನಿನ ಮೇಲೆ ಸವಾರಿ ಮಾಡಲು ಹೊರಟಂತಿದೆ ಎಂದು ಅವರು ಆರೋಪಿಸಿದರು.

ಒಕ್ಕೂಟದ ಸಂಚಾಲಕ ಟಿ.ಅಸ್ಗರ್ ಮಾತನಾಡಿ, ದೇಶದಲ್ಲಿ ಮೊದಲು ಬಡವರು-ಶ್ರೀಮಂತರು ಎಂಬ ಭೇದವಿಲ್ಲದೇ, ದೇಶದ ಎಲ್ಲಾ ಮಕ್ಕಳಿಗೆ ಒಂದೇ ರೀತಿಯ ಶಿಕ್ಷಣ ಸಿಗಲಿ. ಎಲ್ಲಾ ನಾಗರಿಕರಿಗೂ ಉತ್ತಮ ಆರೋಗ್ಯಕ್ಕಾಗಿ ಒಂದೇ ರೀತಿಯ ಆಸ್ಪತ್ರೆಗಳ ವ್ಯವಸ್ಥೆ ಕಲ್ಪಿಸಲಿ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಆಯಾ ಜಾತಿ, ಧರ್ಮೀಯರಿಗೆ ತೊಂದರೆಯಾಗದಂತೆ ಸಂವಿಧಾನ ನೀಡಿದ್ದಾರೆ ಎಂದರು.

ಮುಸ್ಲಿಂ ಒಕ್ಕೂಟದ ಮುಖಂಡರಾದ ಮಹಮ್ಮದ್ ಶೋಯೆಬ್, ನಿಜಾಮುದ್ದೀನ್, ನೂರ್ ಅಹಮ್ಮದ್, ಇಬ್ರಾಹಿಂ ಖಲೀಲುಲ್ಲಾ, ಅತ್ತರ್ ಮುನ್ನಾ, ಐ.ಕೆ.ಮುನ್ನಾ ಸಾಬ್, ಅಕ್ರಂ, ಖಲೀಂವುಲ್ಲಾ ಖಾನ್, ಮಸೂದ್ ಅಹಮ್ಮದ್, ಹನೀಫ್ ಸಾಬ್, ಅಬ್ದುಲ್ ನಬೀ ಸಾಬ್, ನೂರ್ ಅಹಮ್ಮದ್, ಅಬ್ದುಲ್ ರೆಹಮಾನ್ ಸಾಬ್, ಫಾರೂಕ್ ಇರ್ಫಾನ್, ಸಾದಿಕ್, ಏಜಾಜ್ ಇತರರು ಇದ್ದರು.

# ಜೀವನದುದ್ದಕ್ಕೂ ರಕ್ತದಾನ ಮಾಡಿ ಆರೋಗ್ಯವಾಗಿರಿ



ದಾವಣಗೆರೆ, ಜು.2- ಲೈಫ್ ಲೈನ್ ರಕ್ತ ಕೇಂದ್ರ ಮತ್ತು ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಆಶ್ರಯದಲ್ಲಿ 'ವಿಶ್ವ ರಕ್ತದಾನಿಗಳ ದಿನಾಚರಣೆ' ಅಂಗವಾಗಿ ರಕ್ತದಾನದ ಬಗ್ಗೆ ಸಾರ್ವಜನಿಕ ಅರಿವು ಮತ್ತು ಸ್ವಯಂ ಪ್ರೇರಿತ ರಕ್ತದಾನಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರು ಮತ್ತು ಹೃದಯ ರೋಗ ತಜ್ಞ ಡಾ. ಸುಭಾಷ್ ಚಂದ್ರ ಎಸ್. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯಾವುದೇ ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಬಹುದು. ಅಲ್ಲದೇ, ಜೀವನದುದ್ದಕ್ಕೂ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ನಿರಂತರ ಮತ್ತು ನಿಯಮಿತ ರಕ್ತದಾನ ಅತ್ಯಗತ್ಯ.

ಮಧುಮೇಹ, ಅಧಿಕ ರಕ್ತದೊತ್ತಡದಂತಹ ಅನಾರೋಗ್ಯಗಳಿಗೆ ಕಾರಣವಾಗಿರುವ ಕೊಲೆಸ್ಟ್ರಾಲ್ ಅಂಶವನ್ನು ರಕ್ತದಾನದ ಮುಖಾಂತರ ಕಳೆದುಕೊಂಡು, ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಕರೆ ನೀಡಿದರು. ಇಂದಿನ ದಿನಗಳಲ್ಲಿ ರಕ್ತದ ಅವಶ್ಯಕತೆ ತುಂಬಾ ಇದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ಯುವಕರು ರಕ್ತದಾನ ಮಾಡಲು ಮುಂದಾಗಬೇಕು ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತಿಸಿ ಮಾತನಾಡಿ, ಲೈಫ್ ಲೈನ್ ರಕ್ತ ನಿಧಿ ಕೇಂದ್ರದಿಂದ ನೀಡುವ ಸೇವೆಗಳು ಮತ್ತು ಪ್ರಮುಖವಾಗಿ ಹಿಮೋಫಿಲಿಯಾ, ಥಲಸ್ಸೇಮಿಯಾವಲ್ಲದೇ, ಎಲ್ಲಾ ಅನುವಂಶಿಕ ರಕ್ತಸ್ರಾವ ರೋಗಿಗಳಿಗೆ ರಕ್ತ ಮತ್ತು ರಕ್ತಾಂಶಗಳನ್ನು ಸಂಪೂರ್ಣ ಉಚಿತವಾಗಿ ನೀಡುತ್ತಿರುವುದಾಗಿ ತಿಳಿಸಿದರು.

ಲೈಫ್ ಲೈನ್ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಎಮ್.ಎಮ್ ದೊಡ್ಡಿಕೊಪ್ಪದ್ ಅಧ್ಯಕ್ಷತೆ ವಹಿಸಿದ್ದರು. 'ವಿಶ್ವ

**'ವಿಶ್ವ ರಕ್ತದಾನಿಗಳ ದಿನಾಚರಣೆ' ಕಾರ್ಯಕ್ರಮದಲ್ಲಿ ಹೃದಯ ತಜ್ಞ ಡಾ. ಸುಭಾಷ್‌ಚಂದ್ರ**

ರಕ್ತದಾನಿಗಳ ದಿನಾಚರಣೆಯ ಪ್ರಯುಕ್ತ ಡಾ. ಸೃಷ್ಠಿ ಸಾಹುಕಾರ ರಚಿಸಿರುವ 'ರಕ್ತದಾನದ ಅರಿವು' ಎನ್ನುವ ಕನ್ನಡ ಮತ್ತು ಇಂಗ್ಲಿಷ್ ಕೈಪಿಡಿಯನ್ನು ಸಾರ್ವಜನಿಕರ ಅರಿವಿಗಾಗಿ ಬಿಡುಗಡೆಗೊಳಿಸಲಾಯಿತು.

ನಗರದ ಹಿರಿಯ ಅರಿವಳಿಕೆ ತಜ್ಞ ಡಾ. ರಾಜಣ್ಣ ಸಾಹುಕಾರ ಮತ್ತು ವಾಸುದೇವ್ ರಾಯ್ಕರ್ ಮತ್ತು ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆಯಾದ ಎಮ್.ಎಸ್.ಟಿ.ಸಿ ಯ ಸತೀಶ್ ಮತ್ತು ತೇಜಸ್ ಮತ್ತು ರಕ್ತನಿಧಿ ಕೇಂದ್ರದ ಸಲಹಾ ಮಂಡಳಿಯ ಸದಸ್ಯ ಕೊಟ್ರೇಶ್ ಎ.ಎಮ್. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಲೈಫ್ ಲೈನ್ ರಕ್ತ ನಿಧಿ ಕೇಂದ್ರದಲ್ಲಿ ಹಲವಾರು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದ ಶಂಕರ ಮೂರ್ತಿ, ಪ್ರದೀಪ, ಉಮೇಶ್, ಹರೀಶ್ ಅರ್ಮದ್, ಕುಮಾರಿ ನವ್ಯಾ ರಾಯ್ಕರ ಮತ್ತು ಅರುಣ್ ಇವರುಗಳಿಗೆ ಸನ್ಮಾನ ಮಾಡಿ ಗೌರವಿಸಲಾಯಿತು.

ಹಿಮೊಫಿಲಿಯಾ ಬಾಧಿತ ಹಾಗು ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಯುವ ಘಟಕದ ಅಧ್ಯಕ್ಷರಾದ ಶಿವಕುಮಾರ ಮೇತ್ರಿ ಹಾಗು ಹಿಮೊಫಿಲಿಯಾ ಮಗುವಿನ ತಾಯಿ ಶ್ರೀಮತಿ ಶಾರದಾ ಎಸ್. ಅವರು ರಕ್ತದಾನಿಗಳಿಗೆ ಕೃತಜ್ಞತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಹವಳಿ, ಸಿಬ್ಬಂದಿಗಳು ಹಿಮೋಫಿಲಿಯಾ ಬಾಧಿತರು ಮತ್ತು ಕುಟುಂಬದವರು ಭಾಗವಹಿಸಿದ್ದರು. ಈಶ್ವರ್ ತಳವಾರ್ ನಿರೂಪಿಸಿ, ವಂದಿಸಿದರು.

# ಶಿಂಧೆ ಸರ್ಕಾರ ಸೇರಿದ ಅಜಿತ್ ಪವಾರ್



ಮುಂಬೈ, ಜು.2- ಮಹಾರಾಷ್ಟ್ರದ ಎನ್‌ಸಿಪಿ ನಾಯಕ ಅಜಿತ್ ಪವಾರ್ ಬಂಡಾಯವೆದ್ದು ಹಲವಾರು ಶಾಸಕರೊಂದಿಗೆ ಶಿಂಧೆ ಸರ್ಕಾರವನ್ನು ಸೇರಿ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ್ದಾರೆ.

ಮಹಾರಾಷ್ಟ್ರದ ಉಪಮುಖ್ಯಮಂತ್ರಿಯಾಗಿ ಅಜಿತ್ ಪವಾರ್ ರಾಜಭವನದಲ್ಲಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣ ವಚನ ಸ್ವೀಕಾರದ ವೇಳೆ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಕೂಡ ರಾಜಭವನದಲ್ಲಿ ಉಪಸ್ಥಿತರಿದ್ದರು.

ಎನ್‌ಸಿಪಿಯ ಹಿರಿಯ ನಾಯಕ ಛಗನ್ ಭುಜಬಲ್ ಕೂಡ ಮಹಾರಾಷ್ಟ್ರದ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನೂತನ ಸಚಿವರಿಗೆ ರಾಜ್ಯಪಾಲ ರಮೇಶ್ ಬೈಸ್ ಪ್ರಮಾಣ ವಚನ ಬೋಧಿಸಿದರು.

ಮಹಾರಾಷ್ಟ್ರದ ಮಾಜಿ ಗೃಹ ಸಚಿವರಾದ ದಿಲೀಪ್ ವಾಲ್ಸೆ ಪಾಟೀಲ್, ಹಸನ್ ಮುಶ್ರೀಫ್, ಸಂಜಯ್ ಬನ್ಸೋಡೆ, ಅದಿತಿ ತಟ್ಕರೆ, ಧರ್ಮರಾವ್ ಮತ್ತು ಧನಂಜಯ್ ಮುಂಡೆ ಕೂಡ ಮಹಾರಾಷ್ಟ್ರದ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಅಜಿತ್ ಪವಾರ್ ಅವರೊಂದಿಗೆ ರಾಜಭವನಕ್ಕೆ ಬಂದ ಕೆಲವು ಶಾಸಕರು ಪಾಟ್ನಾದಲ್ಲಿ ನಡೆದ ವಿರೋಧ ಪಕ್ಷದ ಏಕತಾ ಸಭೆಯಲ್ಲಿ ರಾಹುಲ್ ಗಾಂಧಿಯೊಂದಿಗೆ ವೇದಿಕೆ ಹಂಚಿಕೊಳ್ಳಲು ಮತ್ತು ಅವರೊಂದಿಗೆ ಸಹಕರಿಸಲು ಶರದ್ ಪವಾರ್ ಅವರ ಏಕಪಕ್ಷೀಯ ನಿರ್ಧಾರದ ಬಗ್ಗೆ ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಡಿ.ಕೆ. ಮಾಧವಿಗೆ ಅಂತರರಾಷ್ಟ್ರೀಯ ಬಿರುದು



ದಾವಣಗೆರೆ, ಜು.2- ವಿಯೆಟ್ನಾಮ್ ದೇಶದ ವಿಯೋಗ ವರ್ಲ್ಡ್, ದಾವಣಗೆರೆಯ ಅಷ್ಟಾಂಗ ವಿನ್ಯಾಸ ಇಂಟರ್ ನ್ಯಾಷನಲ್ ಯೋಗ ಅಕಾಡೆಮಿ ಸಂಸ್ಥೆಯಿಂದ ವಿಶ್ವ ಯೋಗ ದಿನದ ಅಂಗವಾಗಿ ಹೋಚಿ ಮೀನ್ ನಗರದಲ್ಲಿ ಕಳೆದ ವಾರ ನಡೆದ ದಿ ವಿಯೋಗ ವರ್ಲ್ಡ್ ಸ್ಟಾರ್ ಆರ್ಟಿಸ್ಟಿಕ್ ಯೋಗ ಅಂಡ್ ಇಂಟರ್‌ನ್ಯಾಷನಲ್ ಕಲ್ಚರಲ್ ಎಕ್ಸ್‌ಚೇಂಜ್ ಕಾರ್ಯಕ್ರಮದಲ್ಲಿ ನೃತ್ಯ ಕ್ಷೇತ್ರದಲ್ಲಿ ನಮನ ಅಕಾಡೆಮಿಯ ಗುರು ವಿದುಷಿ ಶ್ರೀಮತಿ ಮಾಧವಿ ಡಿ.ಕೆ ಅವರ ಸೇವೆಯನ್ನು ಪರಿಗಣಿಸಿ 'ನಾಟ್ಯ ಮಯೂರಿ' ಅಂತರರಾಷ್ಟ್ರೀಯ ಬಿರುದು ನೀಡಿ ಗೌರವಿಸಲಾಯಿತು.

# ಮಣಿಪುರದಲ್ಲಿ ಮುಂದುವರಿದ ಹಿಂಸಾಚಾರ

**ಬಂದೂಕುಧಾರಿಗಳ ಗುಂಡಿನ ದಾಳಿಗೆ ಸ್ವಯಂ ಸೇವಕರ ಸಾವು**

ಇಂಫಾಲ, ಜು.2- ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಬಿಷ್ಣುಪುರ್ ಜಿಲ್ಲೆಯಲ್ಲಿ ಅಪರಿಚಿತ ಬಂದೂಕು ಧಾರಿಗಳು ನಡೆಸಿದ ಗುಂಡಿನ ಚಕಮಕಿಯಲ್ಲಿ ಕನಿಷ್ಠ ಇಬ್ಬರು ಸ್ವಯಂ ಸೇವಕರು ಸಾವನ್ನಪ್ಪಿದ್ದಾರೆಂದು ಪೊಲೀಸರು ಹೇಳಿದ್ದಾರೆ.

ತಡರಾತ್ರಿ ಖೋಯಿಜುಮಂತಬಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. "ಗ್ರಾಮದ ಸ್ವಯಂಸೇವಕರು" ತಾತ್ಕಾಲಿಕ ಬಂಕರ್‌ನಲ್ಲಿ ಕಾವಲು ಕಾಯುತ್ತಿದ್ದರು.

ಈ ವೇಳೆ ಗುಂಡಿನ ದಾಳಿ ನಡೆದಿದೆ ಎಂದು ಹೇಳಿದ್ದಾರೆ.

ಭದ್ರತಾ ಪಡೆಗಳು ಸ್ಥಳಕ್ಕೆ ತೆರಳುವವರೆಗೂ ಸ್ಥಳದಲ್ಲಿ ಭಾರೀ ಗುಂಡಿನ ಚಕಮಕಿ ನಡೆದಿದ್ದು, ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

# ನಗರದ ಐರಣಿ ಶಾಖಾ ಮಠದಲ್ಲಿ ಇಂದು ಗುರು ಪೌರ್ಣಿಮೆ



ಐರಣಿ ಹೊಳೆಮಠ ಮಹಾ ಸಂಸ್ಥಾನದ ಶಾಖಾಮಠದಲ್ಲಿ ಗುರು ಪೌರ್ಣಿಮೆ ಹಾಗೂ ಶಾಖಾಮಠದ 16ನೇ ವಾರ್ಷಿಕೋತ್ಸವದ ಪ್ರಯುಕ್ತ ಇಂದು ಸತ್ಸಂಗ, ಭಜನೆ, ಪ್ರವಚನ ನಡೆಯಲಿದೆ.

ಐರಣಿ ಹೊಳೆಮಠ ಮಹಾ ಸಂಸ್ಥಾನದ ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ಗುರುಪೂರ್ಣಿಮ ಕಾರ್ಯಕ್ರಮ ಹಾಗೂ ಶ್ರೀಗಳಿಂದ ಆಶೀರ್ವಚನ ಜರುಗಲಿದೆ. ಕುಳ್ಳೂರಿನ ಶ್ರೀ ಬಸವಾನಂದ ಭಾರತಿ ಸ್ವಾಮೀಜಿ, ಜಡೇಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಉಪಸ್ಥಿತರಿರುವರು.

ಅಖಂಡ ಗುರು ಭಜನೆ, ಪಂಚಾಮೃತ ಅಭಿಷೇಕ, ಕೈಲಾಸ ಮಹಾಪೂಜೋತ್ಸವ ದರ್ಶನ, ಮಹಾಮಂಗಳಾರತಿ, ಮಹಾಪ್ರಸಾದ ಏರ್ಪಾಡಾಗಿದೆ ಎಂದು ಶಾಖಾ ಮಠದ ಜೆ.ಕೆ. ಶಿವಾನಂದ್ ತಿಳಿಸಿದ್ದಾರೆ.

# ಪತ್ರಕರ್ತರು ತಮಗಿರುವ ಗೌರವವನ್ನು ಕಾಪಾಡಿಕೊಳ್ಳಬೇಕು

## ಕಾರ್ಯನಿರತ ಪತ್ರಕರ್ತರ ಸಂಘದ ಗುರುತಿನ ಚೀಟಿ ವಿತರಣೆಯಲ್ಲಿ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಕರೆ



**ಸಂಕಷ್ಟದಲ್ಲಿನ ಪತ್ರಕರ್ತರಿಗೆ ಸರ್ಕಾರದ ನೆರವು ಅಗತ್ಯ : ಶಾಸಕ ಕೆ.ಎಸ್. ಬಸವಂತಪ್ಪ**

ದಾವಣಗೆರೆ, ಜು. 2- ಬಹುತೇಕ ಪತ್ರಕರ್ತರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ಆದಾಗ್ಯೂ ನಿರಂತರವಾಗಿ ಪತ್ರಿಕೆ ಹೊರತರಲು ಶ್ರಮಿಸುತ್ತಿದ್ದಾರೆ. ಅಂತವರಿಗೆ ಸರ್ಕಾರದ ನೆರವಿನ ಅಗತ್ಯವಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ನಗರದ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರಿಗೆ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಂತ ಮನೆ ಇಲ್ಲದ ಪತ್ರಕರ್ತರು ಹೆಚ್ಚಾಗಿದ್ದಾರೆ. ಸಂಘವು ಅವರಿಗೆ ಸೂರು ಕಲ್ಪಿಸಿಕೊಡಲು ಶ್ರಮಿಸಬೇಕು. ಅವರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರೊಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚಿಸಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಮಾಧ್ಯಮ ಕ್ಷೇತ್ರದಲ್ಲಿ ಲಾಭ ಕಡಿಮೆ. ಈ ಹಿನ್ನೆಲೆಯಲ್ಲಿ ಈ ವೃತ್ತಿ ಜೊತೆ ವಿವಿಧ ನಿಗಮಗಳಲ್ಲಿ ಸಿಗುವ ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಆದಾಯ ಬರುವಂತಹ ವೃತ್ತಿಯನ್ನೂ ನಡೆಸುವಂತೆ ಅವರು ಸಲಹೆ ನೀಡಿದರು.

ಚಿಕ್ಕವನಾಗಿದ್ದಾಗ ಪತ್ರಿಕೆ ಅಚ್ಚುಮೊಳೆ ಜೋಡಿಸುವಾಗ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಕೆಲವು ವಾರ ಪತ್ರಿಕೆಗಳನ್ನು ಕೂಗಿ ಕೂಗಿ ಮಾರಾಟ ಮಾಡಿದ್ದೆ ಎಂದು ನೆನಪಿಸಿಕೊಂಡ ಬಸವಂತಪ್ಪ, ಅಂದಿನಿಂದಲೂ ನನಗೆ ಪತ್ರಕರ್ತರೊಂದಿಗೆ ಉತ್ತಮ ಒಡನಾಟವಿದೆ. ನಗರದಲ್ಲಿನ ಬಹುತೇಕ ಪತ್ರಕರ್ತರು ನನ್ನ ಸೋದರರಂತಿದ್ದು, ಪ್ರೋತ್ಸಾಹಿಸುತ್ತಿದ್ದಾರೆ ಎಂದರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಪತ್ರಕರ್ತರಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಒಬಿಸಿಗೆ ಸೇರಿದವರಿಗೆ ಮನೆ ಕಟ್ಟಿಕೊಳ್ಳಲು 3 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ಸಿಗಲಿದ್ದು, ನಿವೇಶನವುಳ್ಳ ಪತ್ರಕರ್ತರು ಪಟ್ಟಿ ನೀಡಿದರೆ ಮಂಜೂರು ಮಾಡಿಕೊಡಲಾಗುವುದು ಎಂದು ತಿಳಿಸಿದರು. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ದಾವಣಗೆರೆಯ ಪತ್ರಕರ್ತರು ನೈಜ ಸುದ್ದಿಗಳನ್ನು ವರದಿ ಮಾಡುತ್ತಿರುವುದು ಸಂತೋಷದ ವಿಷಯ ಎಂದು ಶ್ಲಾಘಿಸಿದರು.

ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ಸಮಾಜದ ಕೊಳೆಯನ್ನು ತೊಳೆಯುವ ಪತ್ರಕರ್ತರಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿದೆ. ಅದನ್ನು ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಸ್ವಂತ ಕಟ್ಟಡ ಮಾಡಿಕೊಳ್ಳುವ ಅವಕಾಶವಿದೆ. ಎಲ್ಲರೂ ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು. ತಾವು ಹಿಂದಿನಿಂದಲೂ ಪತ್ರಕರ್ತರಿಗೆ ಸಹಕಾರ ನೀಡುತ್ತಾ ಬಂದಿದ್ದು, ಮುಂದೆಯೂ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೇ, ಇತ್ತೀಚಿನ ಕಾರ್ಯಕ್ರಮದಲ್ಲಿ ಘೋಷಿಸಿದಂತೆ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 20 ಸಾವಿರ ರೂ. ನಗದು ಹಣವನ್ನು ನೀಡಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಮಾತನಾಡಿ, ದಾವಣಗೆರೆಯಲ್ಲಿ 426 ಸದಸ್ಯರು ಗುರುತಿನ ಚೀಟಿ ಪಡೆದಿದ್ದಾರೆ. ಅವರೆಲ್ಲರೂ ಮುಂಬರುವ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ನಡೆಯುವ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಕಾರ್ಯಕ್ರಮ ನಿರೂಪಿಸಿದರು.

ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ. ಒಡೆಯರ್, ರಾಜ್ಯ ಸಮಿತಿ ಸದಸ್ಯ ಬೆಂಗಳೂರಿನ ದೇವರಾಜ್, ಚಿತ್ರದುರ್ಗ ಜಿಲ್ಲಾಧ್ಯಕ್ಷ ದಿನೇಶ್ ಇತರರು ಉಪಸ್ಥಿತರಿದ್ದರು.

ವಾರ್ತಾ ಇಲಾಖೆಯ ನಿವೃತ್ತ ನೌಕರ ಬಿ.ಎಸ್. ಬಸವರಾಜ್ ಪ್ರಾರ್ಥಿಸಿದರು. ಸಂಘದ ಖಜಾಂಚಿ ಎನ್.ವಿ. ಬದ್ರಿನಾಥ್ ವಂದಿಸಿದರು.

ಬೇಕಾಗಿದ್ದಾರೆ
SALES EXECUTIVE
Qualification : Diploma Automobile/Mechanical or Any Degree with 2-3 year experience
ವಿಜಯ ಆಟೋ ಸೇಲ್ಸ್ & ಸರ್ವೀಸ್ ದಾವಣಗೆರೆ
EICHER
ಹೊಸ ಜಿಲ್ಲಾಡಳಿತ ಭವನದ ಹತ್ತಿರ, ಪಿ.ಬಿ ರಸ್ತೆ, ದಾವಣಗೆರೆ
DEALER FOR EICHER TRUCKS & BUSES
Contact : 94480 70098, 9972148455

13ನೇ ವರ್ಷದ ಚಿರಸ್ಮರಣೆ

ದಿ. ಎನ್.ಕೆ. ಚನ್ನವೀರಪ್ಪನವರು
ಜನನ : 02.04.1934 - ಮರಣ : 03.07.2010
ನೀವು ನಮ್ಮನ್ನಗಲಿ ಹದಿಮೂರು ವರ್ಷಗಳಾದವು. ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ತುಂಬಿದೆ. ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ.
ಶ್ರೀಮತಿ ಸುಶೀಲಮ್ಮ ಮತ್ತು ಮಕ್ಕಳು ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು
ಎನ್.ಕೆ. ಚನ್ನವೀರಪ್ಪ ಮತ್ತು ಮಕ್ಕಳು
ನೀರುಳ್ಳಿ ವ್ಯಾಪಾರಿಗಳು, (94486-66322)
ಸಂಗಮ್ ಏಜೆನ್ಸೀಸ್, ವೀಡಾಲ್ ಲೂಬ್ರಿಕೆಂಟ್ಸ್
ಎಪಿಎಂಸಿ ಯಾರ್ಡ್, ಪಿ.ಬಿ. ರಸ್ತೆ, ದಾವಣಗೆರೆ. (98452-50795)
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್,
ಈರುಳ್ಳಿ ವ್ಯಾಪಾರಿಗಳು (98452 59395)

# ಜಿಲ್ಲಾಡಳಿತದಿಂದ ಕೆಂಪೇಗೌಡ ಜಯಂತಿ ಆಚರಣೆ



ದಾವಣಗೆರೆ, ಜು.2- ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಕೆಂಪೇಗೌಡರ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೊನ್ನೆ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಪುಷ್ಪಾರ್ಚನೆ ಸಲ್ಲಿಸಿದರು.

ನಗರದ ಸಿದ್ದಗಂಗಾ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಪಾಲಿಕೆ ಮಹಾಪೌರರಾದ ವಿನಾಯಕ ಬಿ. ಹೆಚ್, ಉಪಮೇಯರ್ ಯಶೋಧ ಹೆಗ್ಗಪ್ಪ, ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಜಿಲ್ಲಾ ಒಕ್ಕಲಿಗ ಸಮಾಜದ ಅಧ್ಯಕ್ಷರಾದ ಅಶೋಕ ಗೌಡ್ರು, ಕೆ.ಟಿ ಗೋಪಾಲಗೌಡ, ಜಗದೀಶ್ ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಪ್ರಥಮ ಪುಣ್ಯ ಸ್ಮರಣೆ

ದಿ. ಶ್ರೀ ಪಿ.ಆರ್.ಶಿವಕುಮಾರ್‌ರವರು
ಶಿರಮಗೊಂಡನಹಳ್ಳಿ. ದಾವಣಗೆರೆ
Date: 03/07/2023
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು,
ಮೊಮ್ಮಕ್ಕಳು, ಸೊಸೆಯಂದಿರು ಹಾಗು ಅಳಿಯಂದಿರು,
ಗೌಡ್ರ ವಂಶಸ್ಥರು ಶಿರಮಗೊಂಡನಹಳ್ಳಿ, ಕಬ್ಬಳದ ವಂಶಸ್ಥರು ಬೆಳವನೂರು
Mob: 9611532277 / 9590811072

ssims SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 6ನೇ ಜುಲೈ 2023 । ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ